‘ ಶ್ರೀ ಬ್ರಹ್ಮಾರ್ಪಣಮಸ್ತು ’

ಗಾನತೀರ್ಥ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
೭, ಲ್ಯಾಂಗ್‌ಫೋರ್ಡ್ ರೋಡ್
ಬೆಂಗಳೂರು-೨೫

ಾನತೀರ್ಥ

ಪ್ರಾಯೇಣ ಸೂತ್ರೇಣ ವಿನಾಕೃತಾನಿ
ಪ್ರಕಾಶ ರಂಧ್ರಾಣಿ ಚಿರಂತನಾನಿ ।
ರತ್ನಾನಿ ಶಾಸ್ತ್ರಾಣಿ ಚ ಯೋಜಿತಾನಿ
ನವೈರ್ಗುಣೈರ್ಭೂಷಯಿತುಂ ಕ್ಷಮಾಣಿ ॥

ಪ್ರಥಮ ಮುದ್ರಣ
೨೦–೧೦–೧೯೭೧

ಬೆಲೆ : ಆರು ರೂಪಾಯಿ

ಮುದ್ರಕರು :
ಬೆಸ್ಟ್ ಪ್ರಿಂಟ್
ಶೇಷಾದ್ರಿಪುರಂ, ಬೆಂಗಳೂರು–೨೦

ಪರಿವಿಡಿ

ಅಂಬಾಸ್ತುತಿ

ಓಂ ನಮೋ ಅಂಬಾ ಭವಾನೀ ಶಂಕರೀ
ಮೋಕ್ಷದಾಯಿನೀ ಕೌಮಾರೀ
ನಿತ್ಯಾನಂದಕರೀ ಶುಭಕರೀ

ಓಂ ನಮೋ ಶಕ್ತಿ ಶಾಂಭವೀ ಸರ್ವೇಶ್ವರೀ
ಪರಮ ಕಲ್ಯಾಣೀ ಕಾಮಾಕ್ಷೀ
ಓಂಕಾರಬೀಜಾಕ್ಷರೀ ಶರ್ವರೀ

ಓಂ ನಮೋ ಉಮಾ ಗೌರೀ ಮಹೇಶ್ವರೀ
ಕೃಪಾಕರೀ ರಿಪುಕ್ಷಯಕರೀ
ಸರ್ವಾನಂದಕರೀ ಶಿವಕರೀ

ಓಂ ನಮೋ ದೇವೀ ದುರ್ಗೀ ದಾಕ್ಷಾಯಿಣೀ
ಮಾತೃರೂಪಿಣೀ ತ್ರಿಜನೇಶ್ವರೀ
ಕ್ಷೇಮಂಕರೀ ಮಹಾಭಯಂಕರೀ

ಓಂ ನಮೋ ಶಿವೇ ಪಾರ್ವತೀ ಪರಮೇಶ್ವರೀ
ಪಾವನಕರೀ ಜನೋದಯಕರೀ
ಕಾಶಿಪುರಾಧೀಶ್ವರೀ ಶ್ರೀಭಗವತೀ

[ಧ್ಯಾನ ಶ್ಲೋಕ]

ಅಭ್ರಮಣಿ

ಪೆರ್ಮರ ಗಿಡಬಳ್ಳಿಯ ನಳನಳಿಪ ಹಸುರ್ದಳಿರಿಗಂ
ನವಧಾತೊಸರುವ ಜಳಜಳಿಪ ನಿರ್ಝರಣಿಗಳಿಗಂ
ಶೈಲರಾಜಿಯ ವರ್ಣಮಯೀ ವರಮಾಣಿಕಗಳಿಗಂ
ಪರ್ವಿದ ಶೈಕತ ಶಯ್ಯಾಬ್ಧಿಯ ಘನವಿಸ್ತೀರ್ಣಕಂ
ನೀಲ ಜಲಧಿ ಚಳೋರ್ಮಿ ಚಿತ್ರಾತ್ರ ಚಯಂಗಳಿಗಂ
ಅಷ್ಟದಿಶಾಧಿಪರ ಮನೋಹರ ವರ್ಣಮಾಲೆಗಳಿಗಂ
ಸಪ್ತವರ್ಣಂ ಪೊತ್ತು ಪರ್ವಿದ ಕಾಮನ ತನಿಗರ್ಬಿಗಂ
ಬೆಳ್ಮೋಡಗಳಂಚಲಿ ಮಿಂಚುವ ಕನಕಾಂಬರಕಂ
ಸಕಲ ಜೀವಂಗಳ ಚಿರಚೇತನದಂಬೋಧಿಗಂ
ವನಭೂಮಿಯೊಳ್ ಅರೆಯರಳ್ದ ಸುಮ ಸಮುಚ್ಚಯಗಳಿಗಂ
ಚಿಂತೆಯುರ್ಬಿ ತೊಳಲ್ದ ಪಥಭ್ರಾಂತ ಪಥಿಕರಿಗಂ
ಚತುಸ್ಸಮುದ್ರಗಳ ಮಹಾ ಉದ್ವೇಲ ಜಲರಾಶಿಗಂ
ಮಂಗಳ ಛವಿಯನುಣಿಸೆ ಜಗನ್ಮಹಾಪ್ರಭು ಅಭ್ರಮಣಿ
ಮೂಡಿದನದೋ ಮೂಡಣದ್ರಿಯ ಮೇಲೆ ಹೊನ್ನಿನುಂಡೆಯೊಲ್ !

ಗುರು ಕೃಪೆ

ಗುರುವೇ, ಓ ದೇವತರುವೇ!
ನಾನೆಂತು ಪೂಜಿಸಲಿ ನಿನ್ನಂ,
ಇನ್ನೆಂತು ನಮಿಸಲಿ ನಿನಗಂ,
ಬಾಳ ದಳ್ಳುರಿಯಲಿ ಸಿಲ್ಕಿ
ತೊಳಲಿ ಬಳಲಿದೆನಗಂ,
ನಿಜ ಮರ್ಮದ ಗಂಟನೆ ಬಿಚ್ಚಿ
ನವ ಹುರುಳನೆ ತೋರಿದ
ಏಕೈಕ ದಯಾಪೂರ್ಣ
ಮೇರು ಮಹಾ ಮಹಿಮನೇ!
ನೀಂ ಜಗದ್ ಮಾನ್ಯಂ ಮೇಣ್
ಶ್ರೀಸಾಮಾನ್ಯಂ ಕೃಪಾ ಸಿಂಧು!
ನಿಮ್ಮ ನೆನೆಯಲದುವೆ ಪೂಜನ;
ನಿತ್ಯ ಸ್ತುತಿಸಲದುವೆ ಕೂಜನ;
ಮತ್ತೆ ನಮಿಸಲದುವೆ ನಮ್ರ ನಮನ;
ಓ ಆತ್ಮ ಬಂಧು! ನೀ ದಾರಿ ತೋರಿದ್ಯೆ ಪರಮಗತಿಗೆ!

ರಾಖಿ

ಮಾಯಾ ಜಗತ್ತಿನ ಭವಚಕ್ರಂ
ಜ್ಯೋತಿರ್ಜ್ವಾಲಾಮಯ ವಜ್ರಬಂಧಂ !
ಸ್ವಾರ್ಥ ತ್ರಿಶೂಲದಲಿ ತಿವಿದು ಪರರ
ಕೆನ್ನೀರಂ ಬಸಿವ ಮೃಗವಿಶೇಷಂ !

ಅಮಾನುಷ ನಿತ್ಯ ವ್ಯವಹಾರ ಕುಶಲಂ
ಅನಿವಾರ್ಯಂ ಸಾಗರ ಸಮ ಘೋರಿಡಲ್ !
ಜೀವನ ರಂಗದ ಕರ್ಮತತಿಯಲಿ
ಕಂಬನಿಯ ಕೋಡಿ ಹರಿದಿರಲ್ ನಿಚ್ಚ

ಅನುಪಮ ಸೋದರ ಭಾವವಂ ಬಯಸಿ
ಮೋಕ್ಷಾತ್ಮ ಶಾಂತಿಯಂ ಕೋರಿ ನಾಂ
ಕಟ್ಟುತಿರುವೆನೀ ಅನನ್ಯ ಪ್ರೇಮಮಯ
ರಾಖಿ ಓ ಸೋದರ, ನಿಗಮಗೋಚರ !
ಕೃಪೆಯಿಟ್ಟು ಕೈಪಿಡಿದು ನಡೆಸೆನ್ನ
ತವ ಸನ್ನಿಧಿಯ ಪರಮ ಪಥಕೆ !

ಪಕ್ಷಿತೀರ್ಥ

ನಿರ್ಮಲ ನೀರಧಿಯ ಜುಳುಜುಳು ಮಂಜುಳಗಾನಂ
ವಿಧವಿಧ ಪಕ್ಷಿಗಳುಲಿವ ಮಧುರ ರಾಗಾಲಾಪಂ
ದೇವ ಗಂಗಾನದಿಯ ಕಿರು ದ್ವೀಪದ ಕರುಣ ಕೃಪೆಯೊಳ್
ಪರಿಪೋಷಿತ ಪ್ರಾಕ್ತನ ಪುಣ್ಯ ತರುನಿಕರದಲಿ
ಶತ ಸಹಸ್ರ ಪಕ್ಷಿ ಸಂಕುಲ ನಿತ್ಯಸುಖವಾಸಿ.
ಪ್ರಕೃತಿ ರಕ್ಷೆ ನೀಡಿರೆ ನೀರವತಾ ನೋಂಪಿನಲಿ
ಪಕ್ಷಿ ನಲಿದುಲಿಯುತಿವೆ ರಸಾನಂದ ತನ್ಮಯತೆಯಲಿ,
ಸುಲಲಿತ ಸುಂದರ ಸಪ್ತಸ್ವರ ಸಂಯೋಜನೆಯಲಿ
ಮಧುರವಾದೀ ನವರಾಗಗಳಂ ಕೋದು.
ವರ್ಣವರ್ಣದ ಪಕ್ಷಿಗಳಿಂಡಿನಲಿ ಬಗೆಬಗೆಯ
ಕಂಠಗಳುಲಿಯಂ ಕಿವಿಗೊಟ್ಟಾಲಿಸ್ಯೆ ವೀರವರ!
ಉತ್ಪ್ರೇಕ್ಷೆ ಎನಬೇಡ ದೇವಕೃಪಾ ಪಕ್ಷಿತೀರ್ಥಂ
ಅಯ್ಯ, ಕೇಳ್! ಹುಗಲಿಲ್ಲ ಇಲ್ಲಿ ಸ್ವೈರವರ್ತನೆಗಂ
ಕೊಲ್ವ ಬಿಲ್ಲು ಬಾಣಗಳನೊಗೆದು ಮನವ ಮಣಿಯ್ಯೆ
ಭಾವ ಭಕುತಿ ಬಲಿವನ್ನೆಗಂ ಓ ದಿಟ್ಟ ಬಿಯದ!

ಗುರುದೇವ ಬುದ್ಧ

ಸಹಸ್ರದಳ ಪಂಕೇರುಹ ಪೀಠಸ್ಥ ಗುರುದೇವ ಬುದ್ಧ !
ಪ್ರಳಯಿತ ಧ್ಯಾನವಿಲಯದಲಿ ಅತುಲ ಜ್ಞಾನ ಪಿಪಾಸೆಯಲಿ
ನೀಂ ಗಳಿಸಿದೆ ನಿರ್ಮಲ ತಪಃಸ್ಫೂರ್ತಿಯ ದಿವ್ಯಧರ್ಮಂ.
ಕುಬ್ಜವಾಗಿರೆ ಧರ್ಮನದಿ, ಲಯಹೊಂದಿರೆ ಸತ್ಯನಿಧಿ
ಮೇಣ್ ಜಾತಿಮತಗಳ ಶುಷ್ಕ ಮೋಹಾಗ್ನಿಜ್ವಾಲೆಯು ತಾ
ದಹಿಸುತಿರಲ್ ಜನಗತಿಯಂ ಮೌಢ್ಯತಾ ಕುಂಡದೋಳ್;
ನೀಂ ಮರುಗಿ, ಕಂಬನಿಯಂ ಮಿಡಿದು, ಕರುಣಾರಸವ ಸೂಸಿ,
ಪ್ರಚಂಡ ವೈರಾಗ್ಯ ವರ್ಷವಂ ಕರೆದು, ಸುಮತಿ ಬಿತ್ತವಂ
ಬಿತ್ತಿ ಜಡಮತಿಯೋಳ್ ಬೆಳೆಸಿದೈ ಸುಜ್ಞಾನ ಸಸಿಯಂ
ಓ ಪರಿಪೂರ್ಣಮೂರ್ತಿ ! ಪ್ರಾಚ್ಯ ಪರಿವ್ರಾಜಕ ಸಂನ್ಯಾಸಿ !
ನಿನ್ನಮರ ಆತ್ಮ ಸುಡಿಲಿನ್ನೂ ಕ್ಷುದ್ರ ಕುಮತಿಯ ಪ್ರಾಚೀರ !
ಮೇಣ್ ತಡೆಗಟ್ಟಲಿ ನಿತ್ಯ ರಕ್ತಿಮ ವಿಭೂತಿಯ ಕಗ್ಗೊಲೆ !

ಓ ಶ್ರೀಹರಿಯೇ!

ಬನ ಬನದಲಿ
ಮನೆ ಮನೆಯಲಿ
ಅರಸೀಅರಸಿ
ದಣಿದೆನೋ ಸ್ವಾಮಿ !
ಕೆಲರಂಬರು ನಿನ್ನ ನೆಲೆ
ಬನದಲೆಂದು
ಕೆಲರೆಂಬರು ನೀನಿಹೆ
ಮನೆಯಲೆಂದು
ಕೆಲರೆಂಬರು ನೀನಿರ್ಪೆ
ಗುಹೆಯಲೆಂದು
ಹುಡುಕ್ಹುಡುಕಿ ನಾ ಸೋತೆ
ಅಲೆದಲೆದು ನಾ ದಣಿದೆ
ಓ ದೊರೆಯೇ !
ವೈದೋರು ಮಮತೆಯಲಿ
ಕೃಪೆದೋರು ಅಬಲೆಯೆಂದು
ಓ ಶ್ರೀಹರಿಯೇ !

ಬಾಲೆ ಎಚ್ಚರೆಚ್ಚರ !

ಇಡು ಹೆಜ್ಜೆ ನಡೆ ಮುಂದೆ
ಬೆಚ್ಚದಿರು ಕುಗ್ಗದಿರು
ನುಗ್ಗು ಮುನ್ನುಗ್ಗು !
ನೆಚ್ಚಿರಲಿ ಕೆಚ್ಚಿರಲಿ
ಹೆಜ್ಜೆ ಹೆಜ್ಜೆಗಳಲಿ
ಅರಿನಿನ್ನ ವರರನ್ನ
ಜಗಶೂನ್ಯ ಮತಿಮಾನ್ಯ
ತಡವೇಕೆ ಘನರೂಪೆ ?
ಮುನ್ನುಗ್ಗು ನೋಂಪಿನಲಿ
ಚಣ ಹಿಂಚೆ ಜಗ ಮಿಂಚೆ
ಜಡ ಮುಂದೆ ನೀ ಹಿಂದೆ
ತರುಣ ಎಚ್ಚರೆಚ್ಚರ !
ತರಳೆ ಎಚ್ಚರೆಚ್ಚರ !
ಭವದ ಮಾಯೆ ಹರಿಯೆ
ಜಗದ ಜಾಲ ತೊಡೆಯೆ
ನರಳದಿರು ನೋಯದಿರು
ಬರಲೆನಿತು ಸಂಕಷ್ಟಂ
ಹಿಂದುಳಿದು ಹಳಿಯದಿರು
ಮಾರ್ಗಯೋಗಂ
ಬಿಗಿದು ಹಿಡಿಯೆ ಬಿಚ್ಚುಗತ್ತಿ
ಕಳೆವುದೇಂ ಮನದ ನೆಚ್ಚು ?

ಜಗ್ಗದೆ ನಡೆಯೆ ನಿಚ್ಚ
ಬಗ್ಗದೆ ಪಡೆಯೆ ಕೆಚ್ಚ
ಹದವರಿತು ಇಡು ಹೆಜ್ಜೆ
ದುಡುಕದಿರು ತಡುಕದಿರು
ಇಡು ಹೆಜ್ಜೆ ನಡೆಮುಂದೆ
ನೇರ ಹಾದಿಯಲಿ
ಜಗದೊಳ್ಪಿಗಾಗಿ
ನಿನ್ನೊಳ್ಪಿಗಾಗಿ
ಬಾಲ ಎಚ್ಚರೆಚ್ಚರ !
ಬಾಲೆ ಎಚ್ಚರೆಚ್ಚರ !

ಕ್ರೌಂಚ ಪಕ್ಷಿ

ದೂರ ದಂತುರದ್ರಿ ಚೂಡಸ್ಥ ದಿವ್ಯ ಪುಷ್ಯ ದಿನಮಣಿ
ನೀಲಿಮಾ ಪಟಲದಲಿ ಸಂಭ್ರಮ ಸುಪ್ರಭಾತವ ಸಾರಿ
ಮಂಗಳಮಯವಾಯ್ತೋ ಜೀವನನದಿ ಧರಾತಲದಿ.
ಬುದ್ಧಿ ಭಾವಗಳವಸರ ಧೀಂಕಿಡೆ ಹೊತ್ತಿನ ತೊಳ್ತಾಗಿ
ಜಡತ್ವವದು ಗೊರಕೆ ಹೊಡೆಯುತ್ತ ಹಗಲ್ ನಿದ್ದೆಯೊಳಿತ್ತು !
ಜಗಜೀವನದ ಚಿತ್ರವಿಚಿತ್ರ ದಿನಚರಿಯನವಲೋಕಿಸಿ
ವೈಮರೆಯಲಾನು ನಭ ನೀಲಿಯ ಶಾಂತಿಯಲಿ ತೂರಿ,
ಮುಗಿಲೆತ್ತರದಲಿ ಹಾರುತಿತ್ತು ಅಸಂಖ್ಯ ಕ್ರೌಂಚವಳ ಪಂಕ್ತಿ !
ವಿರಳದಿಂ ಕರಿಮಣಿ ಪೋಣಿಸಿದ ಮಂಗಳ ಸೂತ್ರದವೊಲ್;
ಶ್ರದ್ಧೆಯಲಿ ಕೋದ ಚಿತ್ರದಂದದಿ ಸುಂದರಾಕಾರಂ
ಮಹಾ ಮಹಿಮಾಮಯ ವಿಯದ್ರಂಗದಲಿ ವಿಹಂಗಸಂಘಂ;
ಅಲೆಯಲೆಯಾಗಿ ಬಿಡಿಬಿಡಿಯಾಗಿ ನಿಯಮಿತ ನೇಮದಿ
ವೈಯ್ಯಾರದಿಂ ತೇಲ್ವುದು ನಿಸ್ತಂಭ ಮಹಾ ತೋರಣಂ;
ಭಾವೋನ್ಮಾದದಿ ಮುಳುಗಿ ನವ ಕಾವ್ಯಸ್ಫೂರ್ತಿಯಲಿ ತೇಲಿ
ಕವಿಯಿತ್ರಿ ತಾ ಕ್ರೌಂಚವಾಗಿ ತೇಲ್ವನ್ನೆಗಂ !

ಕ್ರಾಂತಿಮತಿ

ಬಿಡು ಬಿಡು ಸಂದೇಹ ಓ ಎನ್ನ ಗರಡಿಯ ಮಿತ್ರ !
ಎನಿತು ಕಾರ್ಮುಗಿಲು ಕಾರಿದರೇನು ? ಎನಿತು ಗುಡುಗು
ಮಿಂಚು ಮೂಡಿದರೇನು ? ಇನ್ನೆನಿತು ಕಗ್ಗಪ್ಪು ತಾ
ಕವಿದರೇನು ? ಮನಗಗನದಿ. ಪೆರ್ಚದಿರು ಜವದಿ
ಬಿಡು ನೈರಾಶ್ಯವನು; ತಳ್ಳು ಭಯ ಭೀತಿಗಳನು;
ಈ ಜಡದೇಹ ಹತವಾದರಾಗಲಿ; ಏಕಾತ್ಮ
ಕ್ರಾಂತಿಗತವಾದರೆ ಕೋಟಿಯಾಗಿ ಹೊಮ್ಮುವುದು !
ಕೊಲಲಹುದೇ ಸ್ವಾತಂತ್ರ್ಯ ಕೇಸರಿಯ ಸುಲಭದಿ ?
ಸೆರೆ ಹಿಡಿಯಲಹುದೇ ಕೋಟಿ ಕೋಟಿ ಸಾಸಿಗರ ?
ನಂದಿಸಲಹುದೇ ಜ್ವಾಜ್ವಲ್ಯಮಾನ ಕ್ರಾಂತಿ
ಜ್ಯೋತಿ ಜ್ವಲಿಸುತಿರೆ ಕೆನ್ನಾಲಿಗೆಯಂ ಚಾಚಿ ?
ನಮ್ಮರಣವು ವೈರಿಯ ಪತನಕ್ಕೆ ನಾಂದಿಯಲ್ತೆ ?
ಶತಶತಶತಮಾನಗಳಿಂದೆ ಕಂಬನಿ ಕರೆದ
ಭಾರತಿಗೆ ಈ ಪುತ್ರಶೋಕಂ ಪಿರಿದಲ್ತು
ಮೇಣ್ ಕುಂದಲ್ತು ಓ ಎನ್ನ ಗರಡಿಯ ಮಿತ್ರ !
ಇಂದಿನ ಮಿತ್ತು ನಾಳಿನ ಏಳ್ಗೆಗೆ ದಿವ್ಯ ತುತ್ತು !
ಬೆದರದಿರು ಮರುಗದಿರು ಮಾರಣ ಹೋಮಕ್ಕೆ !

ಓ ಎನ್ನ ಮಾರ್ಗದರ್ಶಿನಿ !

ನಿತ್ಯ ಅಭಿಮಾನಿನಿ ! ಉಗ್ರ ಸಂಸ್ಕಾರ ಸರ್ಪಿಣಿ !
ನಿನ್ನ ಬಿಗಿದ ಹಸ್ತ ನನ್ನ ನಿಚ್ಚ ನಡೆಯ ಬಂಧ.
ಹಗಲಿರುಳು ಕಾಯ್ದೆನ್ನ ನಡೆಸು ನೇರ ಹಾದಿಯಲಿ
ಓ ಎನ್ನ ಮಾರ್ಗದರ್ಶಿನಿ ! ಅನುಕೂಲ ನಾಗಿನಿ !
ಜನ್ಮಜನ್ಮಗಳೀತಿ ಬಾಧೆ ಕಾಡುತಿರಲು ಹದಗೆಟ್ಟು
ಧೃತಿಗೆಡದೊಲು ಕಾಯಲಿ ನಿನ್ನ ಕರುಣೆಯ ಕೈ
ಇಂದುವರೆಗಂ ನೀಂ ನಡೆಸಿರುವುದಾದೊಡಂ
ಮತ್ತೇಕೆ ಶಂಕೆ ಜ್ಞಾನೇಶ್ವರಿ ? ಬೆದರಿತೆನೆ
ಮುಂದಿಟ್ಟ ಅಭಿಶಸ್ತ ಹೆಜ್ಜೆ ಜಾರಿ ಮಾರ್ಗಮಧ್ಯೆ
ವಕ್ರವಿಕೃತಿಯ ಬೆಂಕೆ ಅರೆಚಣದಲಿ ಕೆರಳಿ
ಸುಟ್ಟು ಭಸ್ಮವಪ್ಪುದು ಜನ್ಮರಾಶಿಯಂ ತಳುವಿ;
ಶರೀರ ಸಂಪುಟದಲಿ ಚೇತನವ ಅದುಮಿಟ್ಟು,
ಶೋಕ ಸಂಕಟವಂ ತುಂಬಿ ಪಾಳ್ಗೆಡವುದಲ್ತೇ
ಜನ್ಮ ಜನ್ಮಾಂತರಗಳ ಮಹಾ ಪುಣ್ಯಫಲವಂ ?
ಕಾಯೌ ನೀ ದಯದೋರಿ ಪ್ರಚಂಡ ಪ್ರಮೋದಿನಿ !
ಓ ಎನ್ನ ಮಾರ್ಗದರ್ಶಿನಿ ! ಅನುಕೂಲ ನಾಗಿನಿ !

ಓ ನಂದಲಾಲಾ

ಆರ ಕೇಳಲಿ
ನಿನ್ನಿರುವ ತಿಳಿಯೆ
ಆರ ಬೇಡಲಿ
ನಿನ್ನ ಸ್ಥಳವನರಿಯೆ
ಎಲ್ಲಿ ಹುಡುಕಲಿ
ಎಂತು ಪಡೆಯಲಿ
ಓ ಮಹಾಪ್ರಭು !
ಭವ ಬಂಧನದಲಿ
ತೊಳಲಿ ಬಳಲಿ
ಬೇಸತ್ತು ಹೋಗಿಹೆ ;
ಎಲ್ಲಿ ಆರಸಲಿ
ಈ ಭವದೋಳ್
ನಿನ್ನಯ ನೆಲೆಯ ?
ಓ ಎನ್ನ ದೊರೆಯೆ !
ಕೃಪೆ ಇಟ್ಟು ನೀ
ದಾರಿ ತೋರೆನಗೆ
ತವ ಸನ್ನಿಧಿಗೆ
ಅಣುರೇಣು ತೃಣಕಾಷ್ಠದಿ
ಸಂಚರಿಸುವವ
ಅಗೋಚರನೆನೆ
ಎಂತುಟು ಆಶ್ಚರ್ಯವಿಾ
ಸತ್ಯಾರ್ಥನಿಧಿ
ಓ ನಂದಲಾಲಾ !

ಶೈಲೇಂದ್ರ

ಸಹ್ಯಗಿರಿ ನಿವಾಸಿ ಘನಕೃಷ್ಣ ಶೈಲೇಂದ್ರಂ
ಕದಲದೆ ಇರುತಿರಲಿಲ್ಲಿ ಶತಶತಮಾನಗಳಿಂ
ಎನಿತೆನಿತು ಕಾಲದೇಶಗಳ ಕರ್ಮತತಿಯಲಿ
ಗಂಭೀರ ಶಾಂತಿ-ಪ್ರಳಯ ವಿಪ್ಲವಗಳ ಕಂಡುಂಡು,
ಭಾವಗಗನದಲಿ ಅನುಭವ ಪರಿಪಕ್ವವಾಗಿ
ಏರುತಿದೆ, ಭುಗಿಲೇಳುತಿದೆ ತಾಂ ದೈವತ್ವಕ್ಕೆ
ಕಠಿಣ ಶಿಲಾಭಾವವಂ ತೊರೆದು ಪ್ರಾಣಮಯವಾಗಿ !
ನೀರವತೆಯ ನಿಜಶಾಂತಿ ನೆಲೆ ನಿಂತಿಲ್ಲಿ ಸತತ
ಸುರಸೃಷ್ಟಿಗೆ ಕವಚವಾಗಿ–ಸಂಯಮ ಋಷಿಯಾಗಿ
ಶೈಲಸಿಂಹ ಮೈದಾಳಿದೆ ತಾ ವರ ಪೀಠಮಪ್ಪಿ
ಚೆಂಬಿಸಿಲಲಿ ಮಿಂದು ಹಿಗ್ಗಿ ಸ್ವಾಗತಿಸುವವೋಲ್ !
ಸತ್ ಶಾಂತಿಯನರಸುವ ಭಾವಜೀವಿಗೆ ಮೇಣ್
ಮೇಲೇರ ಬಲ್ಲ ಮಾನವೀಯ ರಸಮತಿಗಂ
ಪಚ್ಚಪರ್ಣಾರ್ಣವದಿ ಸುಳಿದಾಡುವ ಕಲಾದೃಷ್ಟಿ
ದರ್ಶನ ಶಕ್ತಿಯಿಂದುದ್ದೀಪನಗೈಯುತಿರಲ್
ಅಸೀಮತೆಗೆ ಪುಟಪುಟಯುವುದೊ ಪ್ರಾಣಪಕ್ಷಿ !
ಘನವಾಯೆ ತೊಳಲುವುದು ತಾ ಸಿಂಗಾರದಲಿ ಸಿಲ್ಕಿ !

ದ್ವೈತಾದ್ವೈತ ವಿಶಿಷ್ಟಾದ್ವೈತ

ವೇದಭೂಮಿಯ ಅದ್ಭುತ ಜಂತ್ರಿತ ವ್ಯಾಪ್ತಿಯಲಿ
ಪರ್ವಿದ ಮಾಯಾ ತಂತ್ರಿಯ ಸುರಮ್ಯ ಜಾಲದಲಿ
ದ್ವೈತಾದ್ವೈತ ವಿಶಿಷ್ಟಾದ್ವೈತಗಳ ವಿಭ್ರಮ ವೀಚಿ
ಮಿಂಚುತ್ತೇರಿ ಥಳಥಳಿಸಿ ತಾ ಗಗನಾಂಬೋಧಿಯಲಿ !
ಜ್ಞಾನಾಜ್ಞಾನವನಳಿದು ಸತ್ಯಾಸತ್ಯವ ಕೋದು,
ಭುಗಿಲೇಳಿಸಿ ಜ್ಞಾನದಕೂಲ ಪಾರವಾರವಂ
ಅಲೆಯಲೆಯುಪ್ಪಿ ಭೋರ್ಗರೆದು ಮುನ್ನುಗ್ಗಿ ಹರಿಯಲ್,
ಋತ್ವಿಜರು ವಿದ್ವಜ್ಜನರು ದಿನದಿನ ವಾದವ ಹೂಡಿ
ಧರ್ಮಾಧರ್ಮಗಳ ಹುರುಳನೆ ನುಂಗಿ ಜಟಿಲಂ ಬೆಳಸಿ
ಭೋಂಕನೆ ಪೊಳ್ತುರುಳುತ್ತಿರೆ ಕ್ಷಣಕ್ಷಣವನೊದ್ದು,
ಮಹಾ ಪ್ರಕೃತಿಯ ಸಜೀವ ಸತ್ಯದೆದುರಿನಲಿ ಒಣ
ತರ್ಕವಿತರ್ಕಗಳ್ ಬರೀ ಅಸುವಳಿದಾ ಶವ ಮಾಣೋ !

ಸಂಧ್ಯಾಶಾಂತಿ

ದೂರಾದ್ದೂರಂ ಅನಂತಾನಂತಂ
ಸ್ವರ್ಗತುಲ್ಯಂ ಸಂಧ್ಯೆಯೀಶುಭ್ರವೈಭವಂ
ಅರುಣನ ರಾಗಾರುಣ ಛಾಯೆ ವರಮಾಯಾಜಾಲಂ
ದಿನದಿನ ಸವಿದರೂ ಸಾಲದೀಸುಂದರ ಸೊಬಗಂ
ಓಕುಳಿಯೆರೆಚಿದ ಶೀತಲ ವಿಭಾದರ್ಶನಂ ಬಹುರಮ್ಯಂ!

ಬೆಳ್ಳಿಯ ಮುಗಿಲಿಂಗೆ ಕುಂಕುಮ ವರ್ಣವ ಕೋದು
ರೇಶಿಮೆ ಚೆಂಬಲೆಯಂ ನೇಯ್ದು ಮಳೆ ಬಿಲ್ ಮೂಡಿತು,
ಸುರಸೃಷ್ಟಿಯ ವಿನೂತನ ಸಪ್ತವರ್ಣ ವಿನ್ಯಾಸದಲಿ
ಸಾಯಂಸ್ವರ್ಗದ ಸ್ವರ್ಣ ಮಹಾದ್ವಾರಂ ತೆರೆಯೆ
ಇಂದ್ರ ದಿಗಂತದಿ ತುಂಬಿ ಸೂಸಿತು ಬಂಧುರ ಹೊಂದೊರೆ!

ನೀಲ ಪಟಲದಿ ಮರಿಮುಗಿಲು ಹಿರಿಮುಗಿಲು ಸರಸವಾಡೆ
ಮಿಂಚಪ್ಪುಗೆಯ ಸಂಸರ್ಗದಲಿ ಮಹತ್ತಾದುವು ಪಾವನಶ್ರೇಣಿ!
ನೋಳ್ಪ ನಯನಂ ಮಹದಾನಂದದಿ ತುಂಬಿತಶ್ರುಜಲಂ
ಮುಗಿಲು ಮುಟ್ಟಿದ ಮನಸರಸಿಯುಬ್ಬುತ್ತೇರುತ್ತೇರಿ
ನಾನಾದೆ ಬೈಗಿನ ಬಾನಿನಲಿ ತೇಲುವ ಬಾನಾಡಿ!

ವಿಶ್ವನೇತಾ ಗಾಂಧೀಮಹಾತ್ಮಾ !

ಸತ್ಯ ಅಹಿಂಸಾ ಧರ್ಮ ಸಮುದಿತ
ಚಂದ್ರ ಶೀತಲ ಪ್ರಶಾಂತ ಮೂರ್ತಿ
ಶಾಂತಿಃ ಶಾಂತಿಃ ಶಾಂತಿಃ

ಶಕ್ತಿ ಭಕ್ತಿ ಚಿದ್ ಋತಾಗ್ನಿ ಪ್ರಚಂಡಕಾಂತಿ
ಅಸ್ಪೃಶ್ಯ ಸಮರಸ ಬ್ರಹ್ಮವಿದ್ಯಾ ಸಂಭೂತಿ
ಶಾಂತಿಃ ಶಾಂತಿಃ ಶಾಂತಿಃ

ಭಾರತ ರಾಷ್ಟ್ರಪಿತಾ ಅಜ್ಞಾನ ತಿಮಿರ ದಹಿತ
ಪತಿತ ಜನಾವನ ಪರಸು ಪಾವನ ಸ್ಥಿತವಾನ್
ಸರ್ವ ವರ್ಣಧರ್ಮ ಸಮನ್ವಿತ ಸವಿ ಭಂಜನ
ಸುಕೃತ ಸ್ವರಾಜ್ಯ ಪುಣ್ಯ ವರ ವಿಧಾತಾ
ನಾಥಾ ದಾತಾ ವೇದಾಂತ ಸಾರ ಸವಿತಾ
ಮಹಾ ಮಹಿಮಾನ್ವಿತ ವಿಶ್ವನೇತಾ ಗಾಂಧೀಮಹಾತ್ಮಾ !
ಶಾಂತಿಃ ಶಾಂತಿಃ ಶಾಂತಿಃ

ಓ ನವಜೀವನ ಪಥಿಕೆ !

ಗಗನ ನೀಲಧಿಯ ರುಂದ್ರ ಮಹಾ ವಿಸ್ತಾರದಲಿ
ಮೋಡಮಾಲೆಯ ನಿತ್ಯನೂತನ ಚಿತ್ರವಿಚಿತ್ರ
ಸ್ವರ್ಣವೈಭವ ಹೊಮ್ಮಿದೆ ಸಗ್ಗದ ಮೋಹನೀಯ
ಕಲಾಶಾಲೆಯಂದದಿ ; ಅಲ್ತಲ್ತು, ವಾರಿರಾಶಿ
ಧುಮುಧುಮಿಸಿ ನೊರೆನೊರೆಯುಪ್ಪಿ ಹರಿವಂದದಿ
ಪೈದಾಳಿದೆ ಜೀಮೂತ ಮಹಾ ಪರಿವಾರಂ.
ಥಳಥಳಿಸುವ ಅಗಣಿತ ತಾರಾಕೋಟಿ ;
ನೀಲ ಕೌಶೇಯ ವಸ್ತ್ರದಿ ಪೊಳೆವ ವೆಳ್ಳಿ ಚುಕ್ಕಿಯ ಹೋಲಿ !
ನೋಡು ! ಹಾಳು ಚಿಂತೆಯ ತಳ್ಳಿ ನೀಂ ಮನದಣಿಯೆ
ಹರಿವ ನೆತ್ತರು ನೀಲಿಗಟ್ಟಿ ವ್ಯೋಮನ ಮಿಂಚುವ
ತಾರೆಯಾಗುವನ್ನೆಗಂ. ಸೃಷ್ಟಿಸೌಂದರ್ಯವ
ಬಸಿದು ಪಾನಗೈ ವರತೀರ್ಥದೊಲ್ ಹೇ ಆರ್ಯೆ !
ಸುಪ್ತ ಸ್ಮೃತಿಯ ಘನ ಪೇಟಿಗೆಯು ಬಿರಿಯುವವೋಲ್
ತುಂಬಿ ರಸಸಿದ್ಧಿಯಿಂ ಕಲ್ಪನೆಯ ಗರಿ ಬಿದಿರ್ಚಿ
ಪೋಹುದೈ ಪುಷ್ಪಕವನೇರಿ, ಸಗ್ಗಕೆದುರಾಗಿ.
ಬೃಹದ್ ಸಾಗರಗಳ್ ಶ್ವಾಸಕೋಶಗಳಂತಪ್ಪ
ಸಸ್ಯಶ್ಯಾಮಲ ವನಧಿ ಹೃದ್ದೇಶಮಾಗಿ ತೇಲಿ
ಜಗದ್ವೈಸಿರಿಯಲಿ ಭಾವಾತ್ಮಕ ಶ್ರದ್ಧೆ ಪರಿಪುಷ್ಟಿ
ಹೊಂದಿ ಭೂರ್ಭುವನ ಸ್ವರ್ಗಗಳ ಮಹಾಯಾತ್ರೆಗೈ
ಓ ನವಜೀವನ ಪಥಿಕೆ !

ಶ್ರೀ ಮಹಾ ಮಂದರಂ

ಕಾರ್ಗಲ್ಲುಗಳಿಂಡಿನ ಉಡಿಯೊಳ್ ಉದ್ಭವಿಸಿದ
   ವೆಳ್ಳಿ ಝರಿ ಥಳಥಳಿಸಿ, ಮೈಯ್ಯ ವಂಣ್ಣಿಗೆ
ಹಸುರಂ ಬಳಿಯೆ ಬಿಂಕದಿಂ ಬೀಗುವವೋಲ್,
   ಕಲ್‌ಕನಕಂ ಮಿಂಚಿ, ಗಿಡ ಮರ ಬಳ್ಳಿ ಸಿತಸ್ಮಿತ
ಲಕ್ಷ್ಮಿಯೋಲ್ ಹಚ್ಚನೆ ಬೆಳಗಿತು ಯಶೋವಿಜಯಂ !
   ದಿಕ್ತಟದಿ ಸ್ವರ್ಣ ತಿಲಕದೊಳು ಬಾಲಾರುಣಂ
ಮೈದೋರೆ, ನಭ ಭಿತ್ತಿಯಲಿ ಬೀಗಿ ತೇಲ್ವ ಶುಭ್ರ
   ಮೋಡವಾಲೆಗಳ್ ಪುಣ್ಯಪುಂಜದೊಲು ಮುತ್ತಿದಂ
ಶಿಖರವಂ. ಪಾರಾಡುವ ಚಿಲಿಪಿಲಿ ಪಕ್ಕಿಗಳ
   ಕೊರಳುಲಿ, ವರ್ಣರಂಜಿತ ಪುಷ್ಪ ಸುಶೋಭಿತ
ವೃಕ್ಷ ಜೂಟಾಗ್ರಂ ವಾಯುಲೀಲಾ ವಿಲೋಡಿತ
   ನಿರ್ಜರೋಜ್ವಲ ಗಿರಿರಾಜ ನಯನ ಮನೋಹರಂ
ನಾನಾಮೃಗ ವಿಜಯ ವಿಶೇಷ ಪರ್ವತೇಶಂ
   ನಿತ್ಯ ಗಣ್ಯ ಪುರುಷಂ ಶ್ರೀ ಮಹಾ ಮಂದರಂ !

ತೇನೆಯ ವಾಣಿ

ಆಹ ! ಆಲಿಸೈ ! ಆಲಿಸೈ !
ತರು ಪಂಕ್ತಿಯ ಎಲೆವನೆಯಲಿ
ಹೊಮ್ಮುವ ತೇನೆಯ ಸುರವಾಣಿ !
ಬದುಕಿನ ಬವಣೆಯ ಬದಿಗೊತ್ತಿ
ಅರೆಚಣ ಆಲಿಸೈ ಆ ನಾದ !
ಎನಿತು ಮಧುರ ? ಎನಿತು ಸಲಿಲ ?
ಮರೆತು ಜಗದ ಬಲಿತ ಜಂಜಡ
ತೆರೆದು ಮನದ ಜಡಿದ ಬಾಗಿಲ
ಆಲಿಸೈ, ಆ ಮಧುರ ನಾದ !
ಬನಗತ್ತಲೆಯ ನೆಲೆವೀಡಿನಲಿ
ಮನೆಗೊಂಡಿಹ ಚಿರಶಾಂತಿಯಲಿ
ಚಿಮ್ಮಿಬಹ ಆ ಚಿರಂಜೀವ–
ಸತ್ಯ ಕರ್ಣಾನಂದಕರವೈ
ಸುರರ ಕನ್ನವುರ ವಾಣಿಯೊಲ್ !

ಹೇಮಂತ ರವಿ

ಪ್ರಾಚೀ ದಿಗಂಗನೆಯು ಹೇಮಂತ ಲಲಾಟದಲಿ
ಹೊನ್ನವಾರಿಯು ಚಿಮುಕಿಸಿ ರವಿ ದಯಮಾಡಿಸಿದ;
ಸ್ವರ್ಣದುಂಡೆಯು ಕಡೆದು ಸಿಂಗರಿಸಿದವೋಲ್
ತಿರೆಯಮೇಲೆ ರಂಗೆರಚಿ ಮೆರೆಯೆ ಅನುಭೂತ
ಶಾಂತಿಯಲಿ, ತುಹಿನ ಬಿಂದು ಮಂಡಿತ ಸಸ್ಯಶ್ಯಾಮಲ
ವನಧಿ ಮಿನುಗಿತು ವಜ್ರಖಚಿತವಾಗಿ ಧರಾತಲದಿ.
ವಿರಾಟದಲಿ ಸಂಚರಿಪ ನಿರ್ಜಲ ಜೀಮೂತಗಳ್
ಒಯ್ಯೊಯ್ಯನೆ ನೇಯುತಿವೆ ಸುಂದರ ಪ್ರಭಾಳಿಯಂ.
ಅಂದು ಕೋದ ಕನಸಿಂದು ನನಸುಗಟ್ಟಿ ಭಾವನದಿ
ಪಾರವಿಲ್ಲದ ಸಿಂಧುವಾಗಿ, ಹಿಗ್ಗಿ ಹೃದಯ
ಸೌಂದರ್ಯ ಸವಿಸಾಕ್ಷಿಯ ಉಜ್ವಲ ತಪಸ್ಸಿನಲಿ
ಮಂಜು ಕರಗುವಂದದಿ ಕರಗುತಿದೆ ಮೋಹವಾಯಿ!
ನಿರ್ಭೀತಿಯೊಳಿನ್ನು ಜೀವನ ಪಥದೊಳಾವು
ಒಂದಾಗಿ ಸಾಗಿ ದೂರಗಮ್ಯದ ಜಾಡನರಸುವಾ
ಓ ಹೃದಯವಾಸಿ ಮಮ ಬಂಧು !

ಪ್ರಶಾಂತಮೀಸಂಧ್ಯಾಸಮಯಂ

ದೃಷ್ಟಿಯ ಕಕ್ಷೆಯ ಮೇರೆಯಂ ದಾಂಟಿ
ಸೃಷ್ಟಿಯ ಸಾಲು ಕೋಂಟೆಯಂ ಕಟ್ಟಿ
ಗಿರಿ ಕಾನನಗಳ ದಂತುರ ಪೈಲಿ
ಹಬ್ಬಿದೆ ದೂರದಿ ಸುಂದರ ಶೈಲಿ
ಯೋಜನ ಯೋಜನ!

ಪೂರ್ವೀ ಪ್ರಾಂತದ ಗಿರಿಗಳ ಸಾಲು
ನೈ ಮುಡಿಯಲಿ ವನಸುಮಗಳ ನೆಯ್ದು
ಸ್ತೂಪಸ್ತೂಪವೇರಿ ವರ ಶೃಂಗಾರಪಲಿ
ಹಸುರಿಂ ನೀಲಿಯ ಕೋಮು ತಬ್ಬಿದೆ
ನೀಲಿಮಾ ಶಾಂತಿ!

ಗಿರಿ ಶಿರೋಮಂಡಿತ ಸಂಧ್ಯಾರವಿ
ಮೇಘ ಮಾಲೆಗೆ ಓಕುಳಿಯೆರಚಿ
ಚೈತ್ರ ವರ್ಣರಂಜಿತ ವನಧಾತ್ರಿ
ಕಲಾ ತಪಸ್ವಿನಿಯೋಲ್ ಪುಳಕಿತು
ಧರಾತಲದಿ!

ಅಲೆಯಲೆಯಪ್ಪಿದ ಪರ್ಣಾರ್ಣವದಿ
ಮರ್ಮರಗೈಯುವ ಎಲೆಗಳ ಲೀಲೆ;
ಹಸುರಿನ ಲೋಕದೊಳಾನಂದದಲಿ
ಸುಳಿ ಸುತ್ತುವ ಮಂದ ಸಮೀರನ
ವೀಚಿ ವೀಚಿ!

ಗಿರಿಶಿವ ತನೂಜೆ ಅರಣ್ಯ ಶ್ರೇಣಿ
ಅಸಂಖ್ಯ ವೇಶದಿ ಅನಂತ ಭಾವದಿ
ಸ್ಪರ್ಧೆ ಹೂಡುತಲಿರುವುವೋ ಎನೆ
ಹಬ್ಬಿ ತಬ್ಬಿದೆ ದಿಗಂತ ವ್ಯಾಪ್ತಿ
ಗಂತಿ ಗ್ರಂಥಿ !

ಭಾವ ಬಲಿಯೆ ಎಲ್ಲ ಮಹತ್ತ್ವ ಇಲ್ಲಿ
ಭವ್ಯ ಕಾಂತಾರ ಸಮೃದ್ಧಿಯೊಳ್
ಉಚ್ಚ – ತುಚ್ಚಗಳ ಭೇದವಿಲ್ಲವೈ
ತಾ ಶಿವಮಯಮಪ್ಪಿ ತಾಮಸಹೀನ
ಶರೀರ ಸೀಮಾ !

ಕೋಗಿಲೆ ಕಾಮಳ್ಳಿಯ ಗಾನದಲಿ
ಸುಯ್ದು ಬರುವ ಗಾಳಿಯ ಸುಯ್ಲಿನಲಿ
ಭ್ರಮರಾದಿಗಳ ಝೇಂಕಾರದಲಿ
ಅಃ! ಆಲಿಸಾಲಿಸು ಹೊಮ್ಮುತಲಿದೆ ;
ಓಂಕಾರ ನಾದ !

ಮನವೇ, ಮುಳುಗು ಧ್ಯಾನದಲಿ ; ಮೆಲ್ಲನೆ
ನುಂಗಲಿ ನಿನ್ನ ತಪಃಶಕ್ತಿಯು
ಪ್ರಶಾಂತವೀಸಂಧ್ಯಾಸಮಯಂ
ಆತ್ಮ ಸಮೃದ್ಧಿಗೆ – ಸಂತೃಪ್ತಿಗೆ
ಶಾಂತಿ ಶಾಂತಿ ಶಾಂತಿ !

ಚಂದ್ರಗಿರಿ

ಚಂದ್ರಾದ್ರಿ ಚೂಡಸ್ಥ ಸ್ವರ್ಣ ಮನೋಹರ
ಸಾಂಧ್ಯ ದಿನಮಣಿ ಕಣ್ಮನ ಸೆಳೆಯೆ ವಿನೂತನ
ಸುರ ಸುಂದರ ಬೃಹನ್ಮೌನ ಚಿರಶಾಂತಿಯಲಿ.
ಅಲೆಯಲೆಯಾಗಿ ಪರ್ವಿದ ಗಿರಿಪಂಕ್ತಿ ಹಚ್ಚನೆಯ
ರೇಶಿಮೆಯುಟ್ಟು, ಹೊಂದಳಿರ ಕೇಶ ಶೃಂಗಾರ
ಸಿರಿವಂತಿಕೆಯಲಿ ನಳನಳಿಸಿ ಮೆರೆದಿಹುದು.
ಬನ ಬಯಲಲಿ ಸುಳಿದಾಡುವ ಮಂದಾನಿಲನ
ಮೃದು ಮಧುರ ಸರಸ ಕೇಳಿಯಲಿ ತಲೆದೂಗಿ
ನಲಿಯುತಿರೆ ತರುನಿಧಿ ಶಿವಶಿವಾಣಿಯರವೋಲ್ !
ನೆರಳು ಬೆಳಕಿನ ಜೋಡಿ ಹೊಂದಿದೆ ಧರಾತಲದಿ;
ಮೇಣ್ ಹಣ್ಣೆಲೆ-ದರುಗೆಲೆ ವಿಗಲಿತ ಪುಷ್ಪದಳ
ಒಂದಾಗಿವೆ ಮಣ್ಣಿನ ಹುಡಿಯಲಿ ಕಲೆ ಬೆರೆತು
ಮುತ್ತಿಬಹ ಸಂಜೆಯ ಸೊಂಪಿನಲಿ ಮೈಮರೆತು
ಧ್ಯಾನಸ್ಥವಾಗಿದೆ ನೋಡದೋ ಭವ್ಯ ಚಂದ್ರಗಿರಿ !

ಚೋರೆ

ಪಸುರಪ್ಪಿದ ಹಿಪ್ಪಲಿ ಗಿಡದಲಿ
ಅತ್ತಿತ್ತಾಡುತ ನಲಿಯುುವ ಚೋರೆ
ಕಣ್ಗೆಸೆದಿದೆ ವನ ಸುಂದರಿಯೊಲ್ !
ವರ ಚೆನ್ನಿಗ ಪರಬ್ರಹ್ಮ ಅನುನಯದಿಂ
ವಿಧವಿಧ ವರ್ಣವ ಕೋದು
ಪರಿಪರಿ ವ್ಯಂಜನವೂಡಿ
ಸಿದ್ಧಿಯೊಳಪ್ಪಿ ಬಭ್ರುವರ್ಣಂ,
ವಿರಚಿಸಿ ಮಿಂಚಿನ ಹೊನಲಲಿ
ಸೃಷ್ಟಿಯ ವೈಭವವಂ
ಪ್ರಾಸಾದಿಸಲ್ ವನಸುಂದರಿಗೆ
ಪಕ್ಷಿರೂಪೀ ನವ ಶಿಶುವಂ !
ಚೇತನ ವಿದ್ಯುತ್ ಚೇತನವಾಲಂಗಿಸಿ
ಪ್ರೋಣ್ಮಿದ ಪುಣ್ಯೋದಕದಿ ಮಿಂದು
ಮಿಂಚುಲಿಯಲಿ ಮಿಂಚಿ
ರೋಮರೋಮಾಂಚಿತಮಕ್ಕು
ಚೇತನವಾಯ್ತೋ ಜಗ ಹೃದಯ !

ಕೃಷ್ಣಾಂಗಿ

ನೀನಹುದು ಕೃಷ್ಣಾಂಗಿ ದಿಟಂ. ನಿಶಾ ಕಾಲಿಮೆಯೆ
ಮೈವೆತ್ತು ಬಂದವೋಲ್ ಘನ ಶ್ಯಾಮ ಕಾಂತಿ !
ಮೇಣ್ ಕಮನೀಯ ಕಾಳಮೇಘ ಕೇಶರಾಶಿ !
ಮುಂಗುರುಳಿನುಂಗುರವು ಹರಿದಿರೆ ಹಣೆಯ ಮೇಲೆ
ತೋರದಿನಿತು ಭೇದವು ಅಲಕ–ಲಲಾಟಗಳಲಿ
ಕಣ್ಗಳ ಕಾಡಿಗೆ ಶೋಭಿಸುತಿದೆ ಬೆಳ್ಗೊಳಗಳಲಿ,
ಕೃಷ್ಣಾಧರಗಳ ಮಧ್ಯೆ ಕುಂದ ಕುಟ್ಮಲ ತುಲ್ಯ
ದಂತ ಪಂಕ್ತಿ ; ಮತ್ತೆಲ್ಲವೂ ಕೃಷ್ಣ ಮನೋಹರೆ !
ಹೇ ಕೃಷ್ಣೆ ! ನೀಂ ಕಪ್ಪೆಂದು ಕಡೆಗಣ್ಣಿಂದ
ಕಾಂಬರೆಲ್ಲರು, ವರನೊಲ್ಲ ನಿನ್ನೊಡನೆ ಬಾಳ್ಕೆ
ಹೂಡೆ, ಬರೀ ವರ್ಣದಿಂದೆ ಬದುಕು ನೀರಸಮಪ್ಪೆ
ಎಂತುಟು ಪರಿಹಾಸಂ ತೆಗೆತೆಗೆ ಈ ವಿಚಿತ್ರಂ !
ಬಣ್ಣ ಕಪ್ಪಾದೊಡಂ ಹೃದಯ ಕಪ್ಪೇಂ ಕೃಷ್ಣೆ ?
ನಿತ್ಯಂ ಎಸಗುವ ಕಜ್ಜಂ ಕಪ್ಪಪ್ಪುದೇ ವರ್ಣದಿಂ ?
ಸಾಲದೇಂ ತವ ಅನುಭೂತ ಸುರಮ್ಯ ಶಾಂತಿ,
ಚೇತೋಹಾರೀ ನಯನಗಳದ್ಭುತ ಕಾಂತಿ ?
ಹೇ ಚಾರುಸ್ಮಿತೆ ! ನೀನಹುದು ಕಾಮುಕಸ್ತೂರಿ !
ಲೇಖನಿಗಂ ಕಾವ್ಯಕಲಾ ಮಧುರ ಸ್ರೋತಂ !

ಓ ಎನ್ನ ನಾಗಸಂಪಿಗೆ

ತಾಳದೆನ್ನ ಮನವು ; ನುಡಿಯದೆನ್ನ ದನಿಯು ;
ಇತ್ತ ಬಂದರೇನು ? ಅತ್ತ ತಿರುಗಿದರೇನು ?
ಹೃದಯಪಕ್ಷಿ ಮತ್ತೆ ಹಿಂದೋಡುತಿದೆ
ವೃಕ್ಷದೆಡೆಗೆ ತವ ಸುರ ಸೌಂದರ್ಯಕೊಲಿದು
ಓ ಎನ್ನ ನಾಗಸಂಪಿಗೆ !

ಶ್ರೀ ಶಾಲಿನಿಯ ಸವಿಗಂಪಂ ಹೀರಿ ಸವಿದಾನು
ಮುಗಿಸಲಳವೇ ಸಖಿ ? ಮನಂ ಹಾರೋಡುತಿದೆ
ನನ್ನೆಲ್ಲ ತಡೆಯಂ ಕಿತ್ತು ಮತ್ತೆ ಮತ್ತೆ ಮೇಣ್ಮತ್ತೆ
ಚತುರ್ದಲ ಸುಹಾಸಿನೀ ಧವಳ ಮನೋಹರೀ !
ಓ ಎನ್ನ ನಾಗಸಂಪಿಗೆ !

ರೇಣುತಳದಲಿ ಹೊನ್ನ ವರ್ಣ ಮೇಲೆ ಧವಳಿಮಾ
ರಮಣೀಯಾಕೃತಿಗೆ ಕಮನೀಯ ಕಂಪು ಮೇಣ್
ಕೋಮಲ ನುಣ್ಪು ; ಒಡಲಲಿ ಹಿಮಮಣಿಗಳ ಮಿಣುಕು
ಪುಟಪುಟಿಯುವ ಜಿಹ್ವೆಗೆ ಹೆಜ್ಜೇನ್ ಹೊಯ್ವಂದದಿ
ಓ ಎನ್ನ ನಾಗ ಸಂಪಿಗೆ !

ಸಗ್ಗದ ಪಾರಿಜಾತವಂ ನಾಚಿಸುವವೋಲ್
ಶಾಲಿವನದಂಚಿನಲಿ ಮಿಂಚುವ ಪಲ್ಲವ ಪಾಣಿ
ಪುಷ್ಪಮೇಲದಿ ಬಂಡುಣಿಗಳ ಮಧುರ ಝೇಂಕಾರ,
ವೀಣಾನಾದದಿ ಹೊಮ್ಮುವ ಶಿವಸ್ತುತಿಯೋಲ್ !
ಓ ಎನ್ನ ನಾಗಸಂಪಿಗೆ !

ಕಣ್ಮನ ಕಿತ್ತೋಡಿರೆ ನಾಂ ಬರಿದಾಗಿ ನಿಂದೆ
ಅರೆ ಚಣದಿ ಶಕ್ತಿ ಸಮಸ್ತವಂ ಕಳೆದುಕೊಂಡವೋಲ್
ಓ ಭೂಲೋಕ ಸಂಭೂತೆ ! ಶ್ರೀ ಶಿವಮಂಜರೀ !
ಮಮ ಮನಃಪ್ರಾಣಮೋದಿನೀ ಅನುರಾಗಿಣೀ
ಓ ಎನ್ನ ನಾಗಸಂಪಿಗೆ !

ಪೂರ್ವಾದ್ರಿ

ತಿಣುತಿಣುಕಿ ತೀರದಾ
ತಿರೆಯ ಹೋರಾಟದಲಿ,
ಬಗೆಗದಡಿ ಬೇಸತ್ತು
ವರಮತಿಯು ಕಂಗೆಡಲು
ತೊಳಲಿ ಬಳಲದಿರು ಕಳೆ–
ದ ನೆಚ್ಚು ಮತ್ತೆ ಗಳಿಸಿ
ಮನವು ತಿಳಿವನ್ನೆಗಂ.
ಓ ಎನ್ನ ನೇಹ ನಿಧಿ,
ಒಡನೆಯೇ ಬಾ, ಇಲ್ಲಿ ;
ಬಹುದು ಶಾಂತಿ !

ಪೂರ್ವಾದ್ರಿ ಸುಶೋಭಿತ
ಭಾನು ಬಾನೇರುತಿರೆ
ಸ್ವರ್ಣಜಾಲದಂದದಿ
ಹರಿವ ಹೊಂಗಿರಣಗಳು
ತರುಗಣದಿ ತೃಣಗಳ
ಎಸಳಿನಲಿ ಹರಡಿರಲು
ಮಿನುಮಿನುಗುವ ಹನಿಗಣ
ಮಿಂಚಿನ ಮುತ್ತುಗಳಂ
ಮಿಾರಿ ಕಿಡಿಕಿಡಿಯಪ್ಪಿ
ನೋಳ್ಪ ನಯನಂಗಳಿಗೆ
ಮೌನ ಮಮತೆಯಿಂದಲಿ
ನೀಡುವ ಚೇತನವಂ
ಪಡೆಯಲು ಹಿಂಜರಿಯದಿರು
ನೀನಿಲ್ಲಿ ನಿಜಸತಿಯೆ !

ಭವ ಬಂಧನದಲಿ
ತನುಮನ ಸುಟ್ಟು ಸೀರಿ
ಮೈ ಬೆವರಿ ಸೀರಿಳಿದು
ದೇಹ ಪಂಜರದೋಳ್
ಜೀವ ಹೋರಾಡುತಿರೆ
ತಂಪುಣಲು ಬಾ ತಂಗಿ.
ಪಶ್ಚಿಮ ದಿಗಂತದಲಿ
ಹೊಂಗದಿರನಿಳಿಯುತಿರೆ
ಚಿನ್ನದ ಚೆಂಡಿನೋಲ್,
ಬೆಳ್ಮುಗಿಲಿನ ರಾಶಿಗೆ
ಹೊನ್ನ ವರ್ಣವ ಹೊಯ್ದು
ವಿನೂತನ ಶೋಭೆಯಂ
ನಿಂತು ನೋಡು ಶುಭೆ !

ತೆಂಕಣ ಗಾಳಿ ಬೀಸಿ
ಪಡುವಲ ಸೀಮೆ ಹಿಗ್ಗಿ
ತಂಪುಂಡು ತಂಪಾಗಿ
ದಿಗ್ದೇಶ ತಂಪೊರೆಯೆ
ಅಂತರ್ನಿಹಿತ ಅತುಲ
ದುಃಖ ವಾರಿಧಿಯ
ನೆರೆ ಹರಿದು ಹೋಹುದು !
ಬಣ್ಣನೆಗೆ ನಿಲುಕದೀ
ಶಾಂತಿ ಸೌಂದರ್ಯವನು
ಪಡೆಯಲುದಾಸೀನ
ತಳೆಯದಿರಲೇ ದೇವಿ,
ಕೈ ಮುಗಿದು ಬೇಡುವೆ
ಸಾವು ಮುಟ್ಟುವ ಮುನ್ನ
ಬಂದು ನೋಡು ಮಂಗಳೇ !

ಓ ರಸಮಂಜರಿ ಹಗಲುಗನಸೇ !

ಮನಃಪಕ್ಷಿ ತಡೆಗಟ್ಟೆಯಂ ಕಿತ್ತೊಗೆದು
ಹಾರೋಡುತಿದೆ ಭಾವಕೋಶವಂ ವಿಾರಿ !
ನಿನ್ನೆಡೆಗೆ ; ನಿನ್ನಯ ರಸಭರಿತ ಕಥನಕೆ ;
ಕಾಲದೇಶಗಳೆಲ್ಲೆಯನು ದಾಂಟಿ ತಳುವಿ
ನೀನೊರೆವ ಸಕಲ ಸುಖ ಸಂಭ್ರಮ ವೈಭವಕೆ ;
ತಪ್ತಮನಕೆ ನೀನಮೃತ ಮೇಣ್ ದಧಿಘೃತ !
ಅಂತರ್ದಾವಾಗ್ನಿ ಎದೆಯ ಕೋಂಟೆಯೊಳ್ ಸಿಲ್ಕಿ
ದಹಿಸುತಿರೆ ನರಕೋಟಿಯಂ ಲೀಲಾವೇಶದಿ
ನೀ ತಣಿಪೆ ಬಲುಮೆಗಲಿಪೆ ಭವ್ಯ ಭವಿಷ್ಯವ
ನೇಯ್ದು ಜತನದಿ ಓ ರಸಮಂಜರಿ ಹಗಲುಗನಸೆ !
ನೀನಲ್ತೇ ಕಡು ಬಡವಂಗೆ ಆನಂದ ಭೋಗಂ ?
ಕ್ಷಣ ಭಂಗುರಮಾದೀ ಜೀವನವಂ ಸರಸ
ರಮಣೀಯ ರಸವೇದಿಕೆಯಲಿ ಪ್ರತಿಷ್ಠಿಸಿ
ಶುಭ ಕಲ್ಪನೆಯ ನೋಂಪಿನಲಿ ಪೆಂಪುಣಿಸುವೆ
ಹೇ ಮಮ ಮಿಥ್ಯೆ !

ಶ್ರೀ ಕೃಷ್ಣ ಪಾರಿಜಾತಂ

ಷಟ್ಪದ ಮೋಹಿನೀ ಚಿರಧವಳೇ !
ನಿರಂತರ ಸುಗಂಧ ಭೂಷಣೇ
ಮಧುರ ಮಧುಕರಂಡ ಸ್ವರ್ಣಮಯೀ
ಶುಭ್ರ ಮನೋರಮ ಶ್ರೀ ಶಾಲಿನೀ
ಸತ್ಯಭಾಮಾ ಮನೋಲ್ಹಾದಿನೀ
ರುಕ್ಮಿಣೀ ಹೃದಯ ಮೋದಿನೀ
ಜಗದ್ಭವ್ಯಂ ಸುಂದರಂ ನಿತ್ಯಂ
ಪೂಜಿತಂ ಶ್ರೀ ಕೃಷ್ಣ ಪಾರಿಜಾತಂ !

ಗಾನತೀರ್ಥ

ಮಾಗಿಯ ಮುಗಿಲು

ಸುನೀಲವೆತ್ತ ಅಂಬರದಲಿ
ಮುಸುಗಾಂತಿಯ ಮಾಗಿಯ ಮುಗಿಲು
ವೆಳ್ಳಿಯರಳೆಯಂ ರಾಶಿರಾಶಿ
ತುಂಬಿ ಹರಡಿ ಸೊಗಯಿಸಿದವೊಲ್,
ಕಲೆತು ಚಲಿಸುತಿರಲಲ್ಲಲ್ಲಿ
ಕುಳಿಗಾಳಿ ಕಜ್ಜಮನೊಡರ್ಚೆ
ದಿಗಂತರದಿಂದೆ ದಿಗಂತರಕೆ
ಸುಯ್ದು ಸಾಗಿ ಬಿದಿರ್ಚೆ ಬೀಸಿ
ಬರಲುರೆ ಮಾಯಾ ವೇಶದಲಿ
ಮೇಳೈಸಿದ ಬಳಗಂ ಬೆದರಿ
ಗಾರೈಸಿ ಚದುರಿ ದೆಶೆದೆಶೆಗೆ
ಕಂಗೆಟ್ಟು ವಿತರ್ಕಗೊಳಗಾಗಿ
ಕಾವ ದೇವನಂ ಬೇಡಿದುವು
ಶುಭಮಕ್ಕೆ ! ಚಿರ ಗೆಲಮಕ್ಕೆ !

ನೀಲಿಹಕ್ಕಿ

ಶಿಶಿರಸಿಕ್ತ ಶೀತಾದ್ರಿ ಮಸ್ತಕ ಶೋಭಿತ
ರಾಗಾರುಣ ಉಜ್ವಲ ಛಾಯಾ ಮೈತ್ರಿಯಂ
ಸ್ವಾಗತಿಸಿ ಉದಯ ಗಾನಪರ್ವವೀಯೆ,
ಭಾವಪರವಶ ಕವಿ ಉದ್ವೇಲ ರಸಮತಿಗಂ
ಕೊರಳ ಸವಿಯ ಸೂಸೆ ಸಂಭ್ರಮದಲಿ
ಹರಿಯಿತು ಸುಸ್ವರ ಧಾರೆ ಪಕ್ಷಿ ಕೊರಳಲಿ !

ಚೈತ್ರಾನಿಲ ತೀಡುತ್ತಿರೆ ದಿಶೆದಿಶೆಗೊತ್ತಿ
ಮೋಹಮದ ದುಃಖವೆಲ್ಲ ಕಾಮಕೋಟಿ
ಇಚ್ಛೆಯೆಲ್ಲ ಚೆದರಿ ಗಾರೆದ್ದು ಹೋದುದೈ
ದರುಗೆಲೆಯಂದದಿ ವ್ಯೋಮನ ಹಗುರಮಪ್ಪಿ !
ರಾಗಭಾವಲೀಲೆ ಬೀಸುಗಾಳಿಯಲಿ ತೇಲಿ
ನೀಲಿ ಹಕ್ಕಿಯೊಡನೆ ತಾ ನಲಿಯಿತು ನಭದಲಿ.

ಭಾವಹೀನ ಭವ್ಯಹೀನ ಧೀರ ಮಲ್ಲರು
ಕಡೆಗಣಿಸಲ್ ತನ್ನ ಕೊರಳ ಪೊನ್ನುಲಿಯಂ
ಮುನಿಯಲಿಲ್ಲ ನಾಣ್ಚಲಿಲ್ಲ ಪುಟ್ಟ ಹಕ್ಕಿಯು
ಕೊರಳನೆತ್ತಿ ತನಗೆ ತಾನು ಹಾಡುತಲಿತ್ತು
ನೀಲವೆತ್ತು ಬಲುಮೆಯಕ್ಕಿ ಮನವಣಿ !
ಅಂತೆ ಉಲಿವೆ ನಾನು ಭಾವ ಉಕ್ಕಿ ಸೂಸಿ
ಅಲಕ್ಷಿಸೀಜಗದಲಕ್ಷ್ಯ ಮೇಣ್ ವಜ್ರಘಾತ !

ಪ್ರಾರ್ಥನೆ

ಏನೆ ಗೈದರೂ ಎನ್ನಯ
  ಹೆಜ್ಜೆಹೆಜ್ಜೆಯಲಿ ತಪ್ಪು
ನಡೆನುಡಿಯಲಿ ಕರಿಯ ಚುಕ್ಕಿ
  ಮುಖದಲಿ ಮಸಿಯ ಬೊಟ್ಟು
ಮನದಲಿ ಕಿರಿಯು ಎಲ್ಲೆ
  ಕಾಣೆನೋ ಮಾಣೆನೋ
ಹಿರಿಯ ಹೆದ್ದಾರಿಯಂ
  ಉದ್ಧರಿಸಲಂತರಾತ್ಮವಂ
ಭವ ಬಂಧನದೊಳ್ ಸಿಲ್ಕಿ
  ಓ ಮಾತಾಮಯಿ ಪಾವನೆ!
ಇರೆ ಹಲವು ದೋಷವೆನ್ನಲಿ
  ಹೇಸದೆ, ಕರುಣದಿ ಮನ್ನಿಸೌ
ಹೆತ್ತ ತಾಯಿ ತುಂಟ ಮಗುವ
  ಲಾಲಿಸಿ ಪಾಲಿಸುವಂದದಲಿ
ಎನ್ನಮ್ಮ ಜಗದಮ್ಮ ನಿತ್ಯ ನಿರ್ಮಲೆ !

ಓ ಸದ್ಗುರುವೆ....!

ಚಿರಾಚರಿತ ವೇದಪೋಷಿತ ಪುಣ್ಯಭೂಮಿಯಲಿ
ಭೋಂಕನೆ ಸಂಧಿಸಿರಲ್ ನಡೆ–ನುಡಿ–ಮಡಿಗೆಟ್ಟ ಕುಮತಿ
ಮೇಣ್ ಸರಸತಿಯು ಪ್ರಸಾದಿಸಿದ ವರ ಸುಮತಿ
ನಾಕ–ನರಕಗಳಂದದಿ ನಿಚ್ಚ ನಡೆಯ ರಂಗದಲಿ
ಅದಮ್ಯ ಶಕ್ತಿಯ ಅಬೋಧ ಮಾನವ ನಾಗರಿಯು
ಮಿಂದಿದೆ ಬಲಿರಕ್ತದ ಕೆನ್ನೀರಿನ ಕುಂಡದಲಿ.
ಮೇಣ್ ಪ್ರಗತಿಯ ಪ್ರತಿ ಕಣವಂ ಕೊಲ್ಲುತಿದೆ
ಲೋಭ ಮೋಹಗಳ ದುರ್ದರ್ಶ ಕುಟಿಲತೆಯೊಳದ್ದಿ.
ವೇದ ಶಾಸ್ತ್ರ ಪುರಾಣಗಳ ಬುತ್ತಿ ಕರಗುತಿದೆ
ನಿಯಮದಲಿ, ಸುಡು ಬಿಸಿಲಟ್ಟದ ಮಂಜಿನವೋಲ್.
ಭಾರತಿಯ ಧವಳ ಕೀರುತಿಯ ಫಣಿ ಪಣೆಯೆತ್ತಿ
ಮೆರೆಯೆ ಭವ್ಯ ಭವಿತವ್ಯೋದಯದಂಬರದಿ
ನಿಜ ಸ್ಥೈರ್ಯದ ಪರಮೇಕಾಂತದಲಿ ನೀಂ ಹರಸು
ಓ ಸದ್ಗುರುವೆ! ನೂತನ ಪಿನಾಕಧರನೈತರಲೆಂದು !
ಮತ್ತೆ ನೈಕಮುಖಿ ಜಗದ್ಬೆಳಕಾಗಲೆಂದು !
ಮೇಣ್ಮತ್ತೆ ತಪಸ್ವಿನಿ ಚಕ್ರವರ್ತಿನಿಯಾಗಲೆಂದು !

ಓಂ ಶಾಂತಿಃ ಶಾಂತಿಃ ಶಾಂತಿಃ

ಶ್ರೀ ವಿಜಯ ತೋಷಂ !

ನಾಡಿನ ನಟ್ಟನಡುವಿರುವೀ ಪುಣ್ಯಪ್ರದೇಶಂ
ಘೋರಾರಣ್ಯಶೋಭೀ ಶ್ರೀ ವಿಜಯಾರ್ಥ ಪರ್ವತಂ !
ಹಿಮಮಣಿ ಮಕುಟಮಯೀ ಅಸಂಖ್ಯ ಪಂಕೇರುಹ
ಸ್ತೂಪದೊಳ್ ಪೊಣ್ಮಿದೆ ಸುರಮ್ಯವೇಶದಿ ಗಗನದೆತ್ತರ!
ನಭಭಿತ್ತಿಯ ಮಾಯಾತಂತ್ರಿಯಲಾಡುತಿರ್ಪ ಸರ್ವ
ಖೇಚರಿಯರ್ ತಿರ್ರನೆ ಸುಳಿಸುತ್ತಿ ದಣಿದು ಧರೆಗಿಳಿಯೆ
ಆದರದಿಂದೋಲೈಸಿ ಉಡಿಯ ಹಸುರು ತೊಟ್ಟಿಲೊಳಿಟ್ಟು
ತಂಬೆಲರ ತಂಪೂರೆದು ಪಾವನವ್ಯೆಸಿ ನೇಹದಿಂ
ನಿರ್ಝರಿಣಿ ಪರಿಯಲ್ಕೆ ಪಳುಕಿನಲಿ ಪ್ರತಿಬಿಂಬಿಸಿ
ಅರುಣೋದಯದರುಣದ್ಯುತಿ ಮಿಣುಕಲುರೆ ಬನಸಿರಿಯಲಿ
ಘನ ಕೃಷ್ಣಶಿಲಾ ಪೀಠಸ್ಥ ಬಕರಾಜಂ ತಲೆನಾಗಿ
ಜಲವಂ ಪೀರ್ದು ಕೊರಳೆತ್ತಿ ಗುಟುಕಿಪ ಸಮಯದೋಳ್
ಬಾಯ್ದಪ್ಪಿ ಉರುಳ್ವನಿ ವಜ್ರಗಳಂದದಿ ಪೊಳೆಪೊಳೆಯೆ
ನೋಡಾ, ಪರ್ವತೇಂದ್ರನ ಶ್ರೀ ವಿಜಯತೋಷಂ !

ನವರಾತ್ರಿ

ನವರಾತ್ರಿಯ ಮಧುಪಾನದಿ
ಶಾಲಿವನ ಹಸುರೊತ್ತಿ
ಆಶ್ವೀಜ ಬನಸಿರಿ ಪೆರ್ಚಿ
ಮೆರೆದಿದೆ ನವರಂಗಿನಿಂ !

ಸಸ್ಯ ಶ್ಯಾಮಲ ವನಧಾತ್ರಿ
ಪೊಳೆಯೆ ವರ ಪಚ್ಚೆಯೊಲ್
ಪಿರಿದಪ್ಪಿ ಪಸುರ್ಗಿಳಿಗಳ
ಕೊರಲಿಂಪು ಸೊಂಪಾಗಿ !

ಹಸುರು ಹುಲ್ಲಿನ ಮುಕಮುಲ್
ಎಳೆ ಬಿಸಿಲ ಹೊಳಪಿಂಗೆ
ಮಿಂಚೆ ಕಣ್ಮನ ಮತ್ತಾದುವೊ
ನವ್ಯ ಕಾವ್ಯಸ್ಫೂರ್ತಿಯಿಂ !

ಸಂಪಿಗೆ

ಶಿಶಿರ ಶಿವ ಮಂಡಿತ ತರುನಿಕರ ಜೂಟಾಗ್ರಂ
ಅಸಂಖ್ಯ ಸಹಸ್ರ ನವ್ಯ ಕುಟ್ಮಲ ಸುಶೋಭಿತಂ
ಶುಭ ಮನೋಭವ ಮೈತ್ರಿ ಸುಗಂಧ ಸೌಧಾಮಿನಿ
ಮೊಗ್ಗಪ್ಪಿ ಸುವರ್ಣಮಯ ಸುಂದರ ಸಾಕ್ಷಾತ್ಕಾರ!
ಮಧ್ಯೆ ರಾಜಿಪ ಹೊನ್ನಕರಂಡ ದಿವ್ಯಸ್ವರೂಪಂ!
ಸುತ್ತ ಕಮನೀಯ ಪ್ರಫುಲ್ಲ ದಳ ಸಂಭ್ರಮಂ!
ಶೀಕರಸಿಕ್ತ ಮನಮೋಹನೀಯ ನಳನಳಿಪ
ಎಳೆವಳಿರ ಹಚ್ಚ ಶಿಶುಗಳ ಸುಂದರ ಮೇಳದಲಿ
ಮಂದಮಂದಾನಿಲನ ನಿಚ್ಚಲೀಲೆಯ ನೋಂಪಿನಲಿ
'ಸಂಪಿಗೆ' ಎಂಬ ನಿತ್ಯ ನೂತನ ನಾಮಧೇಯದಿ
ಅವತರಿತ ನವಸುಮವೇಶಿ ಸ್ವರ್ಗಲಕ್ಷ್ಮಿ!
ನೋಡಾ!
ಹೇಮಗಿರಿ ಭೂಷಣ ಬಾಲ ಭಾಸ್ಕರ ದೇವ
ಪ್ರೈಯ್ಯಾರದಿ ಸುವರ್ಣ ಜೀಮೂತವಂ ಏರಿ
ದಿನಚರಿಯನ್ನಾರಂಭಿಸಿ ಹೊನ್ನಗೆಯ ಬೀರ್ದಂ.
ರವಿ ಕಾಂತಿಯ ವರಸ್ನಾನದಿ ಫುಲ್ಲ ಕುಸುಮಗಳ್
ಪೊನ್ನಪ್ಪಿ ವಿಜೃಂಭಿಸೆ ವರದಳಿರಾಗ್ರದಲಿ;
ಪರಿಸರದಿ ಪಸರಿಸಿದ ದಿವ್ಯ ಪುಷ್ಪಗಂಧಂ
ನಾಸಿಕ ಬಿರಿವಂದದಿ ನುರ್ಗಿ ಪಡೆದೆನಮಿತ ಹಿತಂ.
ಪಚ್ಚವರ್ಣ ವೃಕ್ಷ ಶಿವೆ; ಸ್ವರ್ಣವರ್ಣ ಪುಷ್ಪಶಿಶು.
ನೋಳ್ಪ ಕಣ್ಮನಕೆ ಶಿವೆ ಜೆನಕರಂದದಿ ತೋರಿಬರೆ
ಅಮಿತಾನಂದದಿ ಶಾನ್ತಿಯನೋಂತು ನಿಂತೆನಲ್ಲಿ.
ಪೂವಿಂ ಪೂವಿಗೆ ಮಧುಮೋಹದಲಿ ಮಲೆಯುತ
ನಲಿಯುತ ಹಾರುವ ಭ್ರಮಂತ ಭ್ರಮರಕೋಟಿ!
ಮೇಣ್ ಕೂಜನಗೈಯ್ಯುವ ಕಾಮಳ್ಳಿ–ಕಾಜಾಣ!
ಕಣ್ಮನ ಮತ್ತಾದುವಲ್ಲಿ ಪ್ರಥಮುಸವ ಪೀರ್ದವೊಲ್!

ಪಗಲಾಣ್ಮ ನಸು ಮೇಲೇರೆ

ಊರಿನ ಅಣುಗರೈತಂದರು ಬಳಬಳನೆ ತೋಷದಿಂ
ಬುಟ್ಟಿಯನಾಂತು ಕೈಯಲಿ ಪುಷ್ಪವ್ಯಾಮೋಹದಿ.
ಪರಸ್ಪರ ನಗೆಮಾತುಗಳಾಡುತ ನವೋತ್ಸಾಹದಿಂ,
ಚಕಚಕ ಮರವನೇರಿ ಮಧುರ ಬಾಲಲೀಲೆಯಲಿ
ಹುಡುಕ್ಹುಡಕಿ ಹೂ ಮೊಗ್ಗುಗಳೆನ್ನದೆ ಚಿವುಟಿ ಗೆಲ್ಮೆಯಿಂ
ತುಂಬಿದರ್ ಬುಟ್ಟಿಯ ಬಾಯಿಯಲಿ ನೋಳ್ಪ ಕಣ್ಣ್ಮರೆ
ಮನುಜ ಸಂಘ ಅಂತಿರಲ್ ಪೇಳುವುದೇಂ ?
ಮೈ ಮರವಟ್ಟವೋಲ್ ಶೋಕಾಕುಲದಿ ನಿಂದೆನಲ್ಲಿ
ಕಣ್ಣುಗಳು ರಂಗೊರೆದುವು ಕಂಬನಿ ಮೂಡಿ !
ಅರೆತಾಸಿನಲಿ ಮರವಂ ಬರಿದುಗೈದು ನಗುನಗುತ
ಅಣುಗರೋಡಿದರು ಊರೊಳಗೆ ಹೂಗಳ ಸಹಿತ
ಆನಂದಾಂಬುಧಿಯೋಳ್ ಮುಳುಗಿ ವಿಜಯತೋಷದಲಿ.
ನಿಸ್ಸಾಯಕಳೆನೆ ಮೈಮನ ಮುದುಡಿರಲಾಸು
ಹೃದಯಬನಂ ತುಂಬಿತಮಿತ ಪರಿತಾಪದಿಂ.
ಅದರೇಂ ? ಪುಷ್ಪಹೀನಳಪ್ಪಿದ ವೃಕ್ಷ ಶಿವೆ
ನಗುತಿರ್ದಳು ಎಂದಿನವೋಲ್ ಶಾನ್ತಮಾಧುರ್ಯದಿಂ !
ನಮೋ ನಮೋ ನಿತ್ಯ ತೋಷಿಣಿ !
ನಮೋ ನಮೋ ಸಸ್ಯ ಶ್ಯಾಮಲೆ !

ಲೀಲಾ ಖೇಲನ

ದೂರ ಮಧುರ ಸಲಿಲ ರಾಶಿಯಲಿ
ರವಿ ಛವಿ ಪ್ರತಿಫಲಿತ ಜಲಮಣಿ
ಉಜ್ವಲ ಕಾಂತಿಯ ಸಂಭ್ರಮದಲಿ
ನಲಿದುಬ್ಬಿ ಅಗಣಿತ ರೂಪದಲಿ
ಲಲಿತ ಲೀಲಾ ಖೇಲನಗೈದು
ವಿಧವಿಧ ಸಂಗೀತವಂ ಪಾಡಿ
ಸಪ್ತಸ್ವರ ಸಂಯೋಜನೆಯಲಿ
ನಡೆದಿದೆ ಬೃಹದ್ ಜಲಮಂಡಳಿಯ
ನಿತ್ಯ ನೂತನ ಹನಿಮುತ್ತುಗಳ
ಅಮೃತ ಫೇನಮಯೀ ಮೇಲ
ಪಾರವಾರದ ಮಹಾತೀರದಲಿ.

ಶರದ್ವಧು

ತಳತ್ತಳಿಪ ಬಿಸಿಲ್ ಕಾದು ಮಿಂಚಿ ಜಗದ್ವಲಯದಿ
ಪೈರು ಪಚ್ಚೆಗಳ್ ಪಸುರಪ್ಪಿದಂ ಶರದಂ ಬಲಿಯೆ.
ಜಲಜಂಗಳ್ ಅಳುಕಿ ಬಳುಕಿ ತೇಲಿ ನೀಲ ಕಮಲಿಸಿಯಲಿ
ನಲಿದಾಡೆ ಮೊಗವಿಟ್ಟು ತಾವರೆ ಎಲೆಗಳ ಹಚ್ಚ ಹಸುರ್
ನೆಲಗಟ್ಟಿನ ಅರಮನೆಯಲಿ. ಅರಗಿಳಿಗಳ ಪಿರಿವಿಂಡು
ಬಂದೆರಗಿ ಭುವಿಯಲಿ ಸಿರಿ ಮೂಡಿದ ಶಾಲಿವನಕೆ
ಕಳಮೆಯ ತೆನೆಗಳಂ ಕರ್ಚಿವಿಡಿದು ಚಂಚುವಿಂದೆ
ಸೊಗಯಿಸಿ ಪಾರ್ದುವು ಪಾರಂ ದಾಂಟಿ ಸುರಚಾಪದವೊಲ್ !
ಪೊಳ್ತುನ್ನತಿಗೇರೆ ಕಾಯ್ದು ಪೊದಳ್ದು ಸುಡು ಬೆಂಕೆಯೊಲ್
ಶರದ್ವಧು ಬಳಲಿ ಪಾಂಡು ಪಯೋಧರೆ ಮರುಗಿದಳ್.
ಬಲ್ಮೆಯ ಸೋದರಿಯರಿಂತು ಅಳ್ಕಿ ಸುರುಂಟುತಿರಲುರೆ
ಕರಂಗಿ ದಯೆಗೈದು ಸುಯ್ಯುತ್ತ ದಿಶೆದಿಶೆಗೆ ಸಾರ್ದು
ಜಲನಿಧಿಯ ಫೇನಪುಂಜದಲಿ ಮಿಂದು ತಣ್ಪು ತಳೆದು
ಹಿಮವೊತ್ತಿ ಮರವಟ್ಟು ತೀಡಿದನಾ ಅಂಜನಾಸುತಂ !

ಶ್ರೀ ಜಗತ್ಪ್ರಾಣವಾಹಿನಿ

ಶ್ರೀ ಜಗತ್ಪ್ರಾಣವಾಹಿನಿ
ಬಗೆ ಬಗೆಯಲಿ ತಾ ಜ್ವಲಿಸಿ
ನಾಡಿ ನಾಡಿಯಲಿ ಪ್ರವಹಿಸಿ
ಅಂತರ್ನಿಹಿತ ಅದ್ಭುತ
ಪರಾಶಕ್ತಿಯೇ ತಾನಾಗಿ
ಮಣ್ಣಿನ ಹುಡಿಯಲಿ ಮಿನುಗಿ,
ಸಸ್ಯ ಶ್ಯಾಮಲ ವನಧಿಯಲಿ
ನಲಿದು, ತೃಣದಲಗಳಲಿ
ಹೊಮ್ಮಿ ಹಿತ ಸ್ಮಿತವ ಚೆಲ್ಲಿ,
ನವ ಸ್ಫೂರ್ತಿಯಂ ಸ್ಫುರಿಸಿ
ಅತುಲ ಕುಸುಮಿತ ಸುಮಗಳ
ರೇಣುರೇಣುಗಳಲಿ ಚರಿಸಿ,
ವರ್ಣವರ್ಣಗಳ ತರಂಗ-
ತರಂಗಗಳಲಿ ಸುಳಿಸುಳಿದು
ನವೋತ್ಸಾಹದಲಿ ತೇಲಾಡಿ
ಹಿಮ ಮಾರುತನ ವೀಚಿಯಲಿ
ಜಗಮಂಡಲವಂ ಸುತ್ತಿ
ಹಿಲ್ಲೋಲ ಕಲ್ಲೋಲಮಪ್ಪಿ
ಜೀವನ ಗಂಗೆಯ ಹುಚ್ಚು
ಪ್ರವಾಹದಲಿ ಏರಿಳಿದು,

ಗಾನತೀರ್ಥ

ಅಗಣಿತ ಸ್ರೋತಗಳಲಿ ಹರಿದು
ರಸ ತೀರ್ಥದಲಿ ಮಿಂದು
ದುಃಖದ ಕಡಲಲಿ ಮುಳುಗಿ
ಮಲರುತಿದೆ ಹೊರಳುತಿದೆ
ಉಜ್ವಲೋಜ್ವಲ ಜೀವನಾಡಿ
ಯುಗಯುಗಾಂತರಗಳಿಂ
ಕೋದು ಘನಾಶ್ಲಿಷ್ಟ ಜನನ ಮರಣಂ !

ವೈಶಾಖ ಚಂದ್ರಿಕೆ

ಪೊಳ್ತೀಳಿದು ತಂಪೊರೆದು ಜಗಮಂಡಲವೆಲ್ಲವಂ
ಆಳ್ದುದು ರುದ್ರ ಗಂಭೀರ ಶಾನ್ತಿ–ಸುಶಾನ್ತಿ.
ಸಕಲ ಜೀವಕೋಟಿ ಪಡೆದಿಹುದು ವಿಶ್ರಾಂತಿಯಂ
ಅಭಯಹಸ್ತ ನೀಡಲ್ ಗಗನದಿ ತಾರಾಗಣಂ.
ಓ ಆರ್ಯೆ ! ಇದೆ ಸಮಯಂ ಧ್ಯಾನಾಂಬೋಧಿಗಂ
ನಿಶ್ಚಲ ಶಾಂತಿಯಲಿ ವೈಶಾಖ ಚಂದ್ರಿಕೆಯ ಮಧು
ಮತ್ತೇರಿ ಜೋಂಪಿಸುತಿದೆ ಪೃಥ್ವಿ ಪ್ರೇಮಸುಖ
ರಸಗಂಗೆಯಲಿ ತೇಲಿ. ಏಂ ಶಾನ್ತಿ ! ನೀರವತೆ !
ಬಾ ಮಂಗಳೆ, ವಿಸ್ಮೃತಿಯ ವಾಹಿನಿಯಲಿ ಕೊಚ್ಚಿ
ಹೋಹನ್ನೆಗಂ, ಮುಳುಗು ಮೈಮರೆತು ನಿರ್ಜನಮಾದೀ
ಪ್ರಕೃತಿಯ ಮಡಿಲಲಿ ತೊಟ್ಟಿಲ ಶಿಶುವಂ ಮೀರಿ !
ಶುಭ್ರ ಜ್ಯೋತ್ಸ್ನಾ ಶುಭ ಮಾಧುರ್ಯದಿಂ ಮಿಂದು
ಮಲೆತು ಬಿಳುಪೇರಿರೆ ವನಧಿ ಧರಾತಲದಿ
ಸ್ಮಿತವದನೆಯಾಗಿಹಳದೋ ತ್ರಿಭುವನ ಕಾಳಿ !

ಓ ಎನ್ನ ಶಿರಮುಡಿ ಮಂಡಿತೆ!

ಓ ತಾಯಿ, ಎನ್ನ ಶಿರಮುಡಿ ಮಂಡಿತೆ! ನಿನ್ನಡಿ ಸೋಂಕಿ
ಅರಳುತಿದೆ ಕವಿತಾ ಕಲ್ಪನೆಯ ನೂತನ ಶ್ರದ್ಧಾಭಕ್ತಿ.
ಮಣಿದೆನ್ನ ಮುಡಿಯಲಿ ನರ್ತಿಸು ನೀಂ ರುದ್ರ ಚರಣ
ಭಂಗಿಯಿಂ, ಹೇ ಪರಾಶಕ್ತಿ, ತಪೋರೂಪಿಣಿ!
ಕನಕ ಶೈಲವಾಸಿನಿ; ಚಿರಧವಳೆ; ಸುಶಾಂತೆ!
ನೀನಲ್ತೇ ಪರಮ ವರದಾಯಕಿ? ಮೇಣ್
ಮಾರ್ಗದರ್ಶಿನಿ ಪಥರಹಿತ ಜೀವನ ಬನದಿ?
ಕಷ್ಟ ನಿಷ್ಠೂರಗಳ ಕಾಳ ಪನ್ನಗಂ ಅಡಿಗಡಿಗೆ
ಕುಟುಕಿ ಘಾಸಿಪಡಿಸೆ ಭಯವಿಲ್ಲ, ದುಃಖವಿನ್ನಿಲ್ಲ,
ನೀನಿರುವನ್ನೆಗಂ ಓ ಎನ್ನ ಶಿರಮುಡಿ ಮಂಡಿತೆ!
ಒಮ್ಮೆ ಕೆರಳಿತೆನೆ ವರಶಕ್ತಿಯ ಪ್ರಚಂಡ ಬೆಂಕೆ
ಬೆಬ್ಬಳಿಪುದಾತ್ಮಮಂ ಕಡೆಗಣಿಸಿ ರುಪ್ರಮರಣ
ಸಂಕಟವಂ! ಮೇಣ್ ಹೃದಯ ಕುಂಡಲಿನಿಯ
ಹೇಳಿಗೆಯು ಬಿರಿಯುವವೋಲ್ ಕಲ್ಪನೆಯ ಗರಿ
ಬಿದಿರ್ಚಿ ಪಾರ್ವುದೋ ಬುದ್ಧಿಕೋಶವಂ ವಿಾರಿ!
ಮಾಯಾಜಾಲವಂ ಕಡಿದು ತುಂಡರಿಸಿ ಜವದಿ.

ಬೆಳ್ಮುಗಿಲ್ ಸೈನ್ಯ

ಕೈಲಾಸದ ಯಾತ್ರೆಗೆ
ಹೊರಟಿವೆ ನೋಡಾ
ಮೇಘಲೋಕದ
ಬೆಳ್ಮುಗಿಲ್ ಸೈನ್ಯ.
ಬಾನಿನ ನೀಲಿಯ
ಇಂದ್ರ ದಿಗಂತದಿ
ಚಿತ್ರ ರಥೋತ್ಸವ
ನಡೆದಿದೆ ನಿರಂತರ ;
ವಿವಿಧಾಕಾರವ ತಳೆದು
ಸುರಸುಂದರಿಯರ ಹೋಲಿ !
ಮೆಲ್ಲನೆ ಮೆಲುಮೆಲ್ಲನೆ
ಸರಿಯುತಿವೆ ಹಿಂಡಿಂಡಾಗಿ
ತರಂಗ ತರಂಗಗಳಾಗಿ
ಅಂತ್ಯವಿಲ್ಲದ ಆಕಾರದಲಿ
ಹೊಳೆಹೊಳೆಯುವ
ಬೆಳ್ಳಿಯ ಬೊಂಬೆಗಳ ತೆರದಿ
ಅಃ! ಏಂ ಸೊಗವೋ ?
ಬಣ್ಣಿಸೆ ಭಾಷಾತೀತಂ
ಯೋಚಿಸೆ ಯೋಚನಾತೀತಂ
ಉಜ್ವಲ ತಾರಾಲೋಕಂ
ಪ್ರಶಾಂತಂ ಚಂದ್ರಶಿವಂ !
ನಿಶ್ಚಲ ಪಕ್ಷ್ಮಂ ; ನಿಶ್ಚಲ ನಯನಂ.
ನಿಸ್ಪಂದಿತ ದೇಹ ಧರಿತ್ರಿಯೊಳ್
ಘುಮುಘುಮಿಸುವ ವಾಙ್ಮಯ ಮಹಾಭಾಗ್ಯಂ !

ಸೋಲು ಸೋಲು

ಸೋಲು ಸೋಲು ಸೋಲು
ಚಣ ಹಿಂಚಿದರೆ ಸೋಲು
ಚಣ ಮುಂಚಿದರೆ ಸೋಲು
ಹೆಜ್ಜೆ ಮುಂದಿಟ್ಟು ಸೋತೆ
ಹೆಜ್ಜೆ ಹಿಂದಿಟ್ಟು ಸೋತೆ
ಮರಳಿ ಯತ್ನವ ಮಾಡಿ
ಮತ್ತೆ ಸೋಲು ಗಳಿಸಿ
ಮರಳಿ ಮರಳಿ ಮರಳಿ
ಮಾಡಿ ಮಾಡಿ ಮಾಡಿ
ಜೀವ ಬಳಲಿ ಬೆಂಡಾಯಿತು
ಮನವು ಒಡೆದು ಚೂರಾಯಿತು
ತೇಲೆಲೆ ಓ ಜೀವ ! ಮತ್ತೇಕೆ ಈ ಭವ ಬಂಧನ ?
ಬಾಳ ಬನಕೆ ಬಸಿಯೆ ನೆತ್ತರಂ ಬಹುದೇಂ ಶಾಂತಿ ?
ತನ್ನವರ ಹೀನಾಸೆಯಂ ಕಿತ್ತೊಗೆದು ಮನದಿಂದಲಿ
ಬೀಸುಗಾಳಿಯಲಿ ತೇಲು ತೇಲೆಲೆ ಆತ್ಮಬಂಧು !
ನೀಂ ಹೋಹನ್ನೆಗಂ ದೂರ ದೂರ ಶೂನ್ಯದಂಚಿಗಂ
ತೇಲು ತೇಲು ಜಡವಂ ಕೊಚ್ಚಿ ದಿಟ್ಟತನದಿ ತೇಲು
ಮುಂದೆ–ಬಹು ಮುಂದೆ ಹಬ್ಬಿಹುದು ನೀಲಿಮಾ ಸಿಂಧು!

ಸರ್ವಧರ್ಮ ಸಮನ್ವಯಂ

ಬೆಬ್ಬಳಿಸಿ ಭೋರ್ಗರೆವ ಕಡಲಿನ
ಅಲೆಗಳಪ್ಪಳಿಸಿ ನೊರೆಗರೆದು
ಶುಭ್ರಮಣಿಗಳ ಸುಮಗಳೈತಂದು
ಸಮ್ಮೇಳನಗೈದಿವೆ ವಿನೂತನ
ಸಹಸ್ರ ಸಹಸ್ರ ಬಂಧುರ ಶೈಲಿಯ
ಮನೋಮಯ ದಂತುರ ವಿನ್ಯಾಸದಲಿ

ನೋಡಾ
ಸಮರಸ ಲೀಲಾ ವಿಲಾಸದಲಿ
ತನ ಹೃದಯ ಮಧು ಕುಂಜವ ತುಂಬಿ
ಬೃಂದಾವನ ರಾಸಲೀಲೆಯಂ
ಪೊಣ್ಮೆ, ನೂಪುರ ಘಂಟಿಕಾರವ
ರಣರಣಿತ ಶುಭ ಖೇಲನದಲಿ
ಮೆರೆದಿವೆ ಸೀಮಾರೇಖೆಯೊಳಾ-
ನಂದದಲಿ ನೀರಧಿ ನೀಲಧಿಗಳ್ !

ಸ್ನೇಹ ವಿಸ್ತಾರದ ಸಂಭ್ರಮದಿ
ತನುಮನ ಬೀಗಿ ಶ್ರದ್ಧೆಯು ಜ್ವಲಿಸಿ
ರಾಗಾರುಣ ದಿವ್ಯ ಛವಿಯಂ ಚೆಲ್ಲಿ-
ಮುದದಿ ಮಾಯಾಲೋಕವ ಬೆಳಗೆ
ಸರ್ವಧರ್ಮ ಸಮನ್ವಯಂ ತಾ ಹೋಲಿ
ಮೈ ಮರೆದಿಹನದೋ ಮೂಡಣ ಭಾನು !

ಮನಃಭ್ರಮರ

ದಿನದಿನ ಪ್ರತಿದಿನ
ಸಂಜೆಯೈತರೆ ತವಕಿಪುದು
ಉದ್ಯೋಗಶೀಲ ಮನಂ
ತೋಂಟಗಾರಿಕೆಯ
ನಿತ್ಯ ಕರ್ಮಯೋಗಕೆ.
ಗಿಡಗಳಡಿಯ ಕಳೆಯ ಕಿತ್ತು
ಮುದದಿ ಗೊಬ್ಬರವೂಡಿ
ಹದವರಿತು ನೀರು ಹೊಯ್ದು
ಸುರ ಸುಂದರ ಬನವೈಸಿ
ಪಚ್ಚ ಪಲ್ಲವದಿಂ
ವಿಧವಿಧ ಪೂಗಳ್ ಪೊಮ್ಮಲ್
ವರ ಸುಮ ಶೃಂಗಾರದಲಿ
ಈಶನ ಕರುಣೆಯಂ
ಕುಚೇಲ ಭಕ್ತಿಯಂ
ವಿಶ್ವ ಶಾಂತಿಯಂ
ಬಸಿದು ಬಂಡುಂಡು
ದೇವಿ ಕವಯಿತ್ರಿಯ
ಮನಃಭ್ರಮರ ಪಾರ್ವುದೋ
ಮಹಾ ಪಾರಂ ದಾಂಟಿ !

ಸರ್ವಂ ಬ್ರಹ್ಮಮಯಂ

ಓ ಗಾಯತ್ರಿ !
ಅತ್ತಿತ್ತಲುಗದಂದದಲಿ
ಮಂತ್ರಿಸೆನ್ನ ತಂತ್ರಿಯಲಿ
ಶುದ್ಧ ಗೇಯದಲಿ ತೇಲಿ
ವ್ಯೋಮ ಕೇಂದ್ರಕ್ಕೈದು
ಧುಮುಕೆ ಅನನ್ಯ ಆಮುತ್ರಿಕ
ಅಮೃತಾಂಬೋಧಿಗಂ
ನಿತ್ಯ ನೂತನಮಾದೀ
ಬಾಳುರಿಯಂ ಬದಿಗೊತ್ತಿ
ಜಡಿದು ನೂಂಕಿ ದ್ವೈತವಂ
ಕೂಡಿ ಪಾಡಿ ಅದ್ವೈತವಂ
ಮಹೋದಯದೊಳದ್ದಿ ಮನಂ
ಆರಾಧಿಸೆ ಸರ್ವಂ ಬ್ರಹ್ಮಮಯಂ

ಓ ಜ್ಞಾನ ಪಿಪಾಸಿನೀ !

ಮುಂಬೆಳಕು ಮೂಡುವ ಮುನ್ನ
ತಾಪತ್ರಯಗಳ ಸುಳಿ ಮೂಡಿ
ಕವಲೊಡೆದು ತಾ ಹಲವಾಗಿ
ಬೊಬ್ಬುಳಿಸಿ ನಿಲ್ಲಲೆದುರು
ಕಂಗೆಟ್ಟು ಹಳಿಯಲು ಬೇಡ
ಬರುವುದೆಲ್ಲ ನಿನ್ನೊಳ್ಳಿತ್ತಿಗಾಗಿ !
ಮೇಣ್ ಜಗದೊಳ್ಳಿಗಾಗಿ !
ಅಂತಃಚಕ್ಷುವ ತೆರೆಸಲ್
ಅಜ್ಞಾನ ಕೋಟೆಯನೊಡೆಯಲ್
ಹೃದಯ ಸಂಪುಟವ ತುಂಬಲ್
ಅನುಭವವೇಧಿಯನೇರಲ್
ಕೋಟಲೆ ಕೋಟಿಯ ತುಂಬಿದ
ಪರಶಿವಂ ಸಾಮಾನ್ಯನಲ್ತು
ಮಹಾ ಪ್ರಳಯಕಾರಕಂ !
ಜಡವಂ ತರಿದೀಡಾಡೆ
ಹೂಡಿದ ದಿವ್ಯ ಸಂಚು !
ಜೀವನ ಮಾರ್ಗ ಯೋಗದಿ
ದಟ್ಟ ಕಳ್ತಲೆಯಂ ಕವಿಸಿ
ಬೆಳಕಿಗಂ ಘೀಳಿಡುವ
ಕಡು ಬಯಕೆಯಂ ಕೆರಳಿಸಿ

ಕದಂಬ ಕೋರಕ ನ್ಯಾಯವಂ
ಭುಗಿಲೇಳಿಸಿ ಮನದೊಳ್
ಬುದ್ಧಿಗಲಿಸುವ ಬುದ್ಧಿ ಶಿಲ್ಪಿ !
ಮೇಣ್ ಮೋಕ್ಷದಾಯಕಂ !
ಶಿರವ ಮಣಿದು ಕೈಯ್ಯ ಮುಗಿದು
ಸ್ವಾಗತಿಸು ನುಗ್ಗಿ ಬರುವ
ಶತಕೋಟಿ ಸಂಕಷ್ಟವಂ
ಓ ಜ್ಞಾನ ಪಿಪಾಸಿನೀ !

ಸಹಸ್ರ ಸಹಸ್ರ ನಮನಂ !

" ಕೃಷ್ಣಾ ನೀ ಮಾಯೆಯೊಳಗೋ
ನಿನ್ನೊಳಗೆ ಮಾಯೆಯೋ "
ಎಂದರೋ ಮಹಾನುಭಾವರು
ನಿನ್ನಂ ಅರ್ಥೈಸಲಾರದೆ
ಕೇಳಿ ಪಾಡಿ ಸ್ತುತಿಸಿದರೂ
ಉತ್ತರಿಸಲಿಲ್ಲವೇಕೋ ಭಕ್ತಜನಕೆ
ಹೇ ಕರುಣಾಳು ಶ್ರೀಹರಿಯೆ !
ಹನಿಯಲಿ ಸಾಗರವಂ ಕಡೆದು
ಹುಡಿಯಲಿ ಧರಿತ್ರಿಯಂ ಗೈದು
ಹೊಗೆಯಲಿ ವ್ಯೋಮವಂ ರಚಿಸಿ
ತ್ರಿಲೋಕಗಳ ನಿಯಮವಂ ಕೋದ
ತ್ರಿಲೋಕ ಜ್ಞಾನಿಯೇ !
ನಿನಗಂ ಸಹಸ್ರ ಸಹಸ್ರ ನಮನಂ !

ಮೌನ ಶಾಂತಿ

ಭೀಷಣ ವೇಶದ ಜಲರಾಶಿಯಲಿ
ಸತ್ಯಗಾಥವು ನಿತ್ಯವು ಕೋದು
    ಚಂಚಲ ತಾನದಿ ಮಂಗಳ ಹಾಡಿ
ಹಾಲ್ನೊರೆಯ ಮುಗುಳ್ನಗುವನೆ ಸೂಸಿ
    ಬೊಬ್ಬುಳಿಸುತಿದೆ ಸಾಗರವೇಲೆ
ಆನಂದಾಬುಧಿಯಲಿ ಮುಳುಗಿ.

ಗಗನ ನೀಲಧಿಯ ಬಿಂಬಿಸಿ ಒಡಲಲಿ
ಥಳಿಸಿ ಥಳಥಳಿಸಿ ವ್ಯೈಮನ
    ತುಂಬಿ ಹರುಷದಲಿ ಮೌನಶಾಂತಿಯಂ
ಕಡೆದು ಹೃದಯದಮರಾವತಿಯಲಿ
    ರವಿ ಶಶಿ ತಾರಾಳಿ ನೀಹಾರಿಕಾ
ಕುಲಕೋಟಿಗಳಂ ಧರಿಸಿಹೆ ಮುದದಿ.

ಚಂದ್ರೋದಯ

ನೀಲಮೇಘ ಭಿತ್ತಿಯಲ್ಲಿ ಬೆಳ್ಮೋಡಗಳ ಮಾಲೆಯಲ್ಲಿ
ಬೆಣ್ಣೆಯ ಮುದ್ದೆಯಂದದಿ ಕುವಲಯ ನೇತ್ರವರಳುತ್ತಿರೆ
        ಮೂಡಣಾದ್ರಿಯ ಮುಖಪದ್ಮದೊಳ್ ಬೆಳುದಿಂಗಳ ಸೂಸಲೆಸೆದು
        ಖಗ–ಮಿಗಂಗಳ್ ಮತ್ತಾದುವು ರಾಗಾನುರಾಗಂ ಪೆರ್ಚೆ.
ಮೊಗ್ಗು ಮೂಡಿಮುಸು ಮಾಮರದೊಳ್. ಮಲ್ಲಿಗೆಯರಳಿದುವು
ಸೌರಭ ಸೂಸಿ, ಆನಂದಗದ್ಗದ ರಸ ಋಷಿಯೊಲ್ !
        ಸೋರ್ವ ಧವಳಧಾರೆ ಸೋಂಕಲೊಡಲಂ ಭುವನಮಂಡಲ
        ಸಿಂಗರವ ತೇಜಿಯೊಲ್ ಪುಳಕಿತು ಮಂಜುಳ ವರ್ಣಂ ತಳೆದು.
ಇಂತು ಪರ್ವದ ಪುಣ್ಯರಾಶಿಯಂ ಅಭೀಕ್ಷಿಸಿ ತಾರಾಳಿ
ಇರ್ಮಡಿ ನೋಂಪಿನಿಂ ಪೆಂಪಿ ಪೆರ್ಮೆಯಿಂದೆ ಮಿರಾರಿ ಮೆರೆದಂ.
        ನೀರುಣದ ಮುಗಿಲು ಬೆಳರ್ತು ಬೆಂಡಾದುವು ಜಾಳಿಗೆಯೊಲ್.
        ಎಲೆವನೆಗಳಲಿ ಬೆಚ್ಚನೆ ನಿದ್ದೆಗೈದ ಪಕ್ಕಿ ಸಂಕುಲಂ
ಭ್ರಮಿಸಿ ಪಾಲ್ಬೆಳಕಂ ಅತ್ತಿತ್ತ ಈಕ್ಷಿಸುತಿರಲುರೆ
ಕಂಡೆನೊ ನಿಶೆಯ ಪರಿಮತ್ತರೀಯಂ ಮರವಡಿಯೊಳ್ !

ಓ ಎನ್ನ ಮುದ್ದು ಮಗುವೆ !

ನಾನೊಂದ ಪೇಳುವೆ
ನೀ ಕೇಳು ಮಗುವೆ !
ನಿನ್ನ ಮುಗ್ಧ ಮನಕೆ
ತನಿಯೊರೆಯುವೆ
ಶುಭವಂ ಕೋರಿ.
ಬೇಸರವೆನಬೇಡ ;
ಕಷ್ಟವೆನಬೇಡ ;
ಮಮ ಮಸ್ತಕ ನೀರೇಜದಲಿ
ದೂರ ಶ್ರದ್ಧೆಯಂ ತುಂಬಿ
ಸುಳಿ ಸುತ್ತುತಿರುವುದೀ
ಪ್ರೇಮಮಯ ಹಾರೈಕೆ.
ವರುಷವೆರಡರ ಹಿಂದೆ
ಕಡು ನೋವಿನ ಜಾಲದಲಿ
ನೀ ಜನಿಸಿದೆ ವಂಶ ಬೆಳಗೆ !
ಭಗವಂತನಿತ್ತಿಹ
ವರಪುಷ್ಟಿಯುತ
ತನುಮನ ನಿನಗಂ
ಮಮತೆಯ ಮಳೆಗರೆದು,
ಮೋಹೆಮ್ಮ ಹರಕೆಗೊಲಿದು,
ಲಾಲಿಸು ಕಿವಿಗೊಟ್ಟು,

ಮಾನಿಸು ಮನಗೊಟ್ಟು,
ಓ ಎನ್ನ ಮುದ್ದು ಮಗುವೆ!
ಇಷ್ಟದೈವವಂ ಬೇಡುವೆ
ದುಷ್ಟ ಶಕ್ತಿ ಮುಟ್ಟದಿರೆ ನಿನ್ನಂ
ಮಮ ಕುಲ ದೇಗುಲಕೆ
ದೀಪಾಂಕುರವಾಗೆ
ಜಾನಗೇಡಾಗದೆ
ಪಡೆಯೌ ಕುಡಿಮಾಸದ
ಧವಳ ಕೀರುತಿಯಂ !

ಪಕ್ಷಿಗುರು

ಆಲಿಸೌ, ಚೈತ್ರ ಪಿಕದ ರಾಗ
ಎನಿತು ಮಧುರವಿಾ ಗಾನಭೋಗ ?
ಆದರೆಲ್ಲಡಗಿಹನೋ ಪಕ್ಷಿದೈವ
ಹುಡುಕಿದರೆಲ್ಲಿಯೂ ಕಾಣಿಸನೌ

ಎಲ್ಲಿಹೆ ಗಾನಯೋಗಿ ರಸಋಷಿಯೆ !
ಇಂತಡಗಿ ಕುಳಿತು ಹಾಡುವೆ ಏಕೆ ?
ನಿನಗಾರ ಭಯವಿಹುದು ಈಗಿಲ್ಲಿ ?
ಇರುತಿರೆ ನಾನೋರ್ವಳೆ ನೆಲದಲ್ಲಿ.

ಮನಃಪ್ರಾಣ ತೊಯ್ಯುವಂತೆ ಹರಿಯೆ
ನಾದವೆತ್ತ ನಿನ್ನ ಪ್ರೇಮಭಾವ !
ಕತ್ತಲಳಿಸಿ ಬೆಳಕು ತುಂಬಿತೆನ್ನ
ಬಾಳ ಕಣಿವೆಯ ಕಿರು ದಾರಿಯಲಿ.

ಒಮ್ಮೆ ಹೊರಬಂದು ವ್ಯೆದೋರೌ
ಕಾತರ ತೃಷಿತ ಲೋಚನಗಳಿಗೆ,
ಮಿಂಚುಲಿಯ ಸವಿ ಕಿವಿ ತುಂಬಿದರೂ
ಕಾಣೆನೊ ಓ ಪಕ್ಷಿ ಗುರುವೆ !

ಮಂದ ಮಂದಿ ಕಡೆಗಣಿಸಲ್ ನಿನ್ನ
        ಪೊನ್ನುಲಿಯಂ ಅಶ್ರದ್ಧೆಯಲಿ, ತಾ
ಆಲಿಸುತಿದೆ ಧರೆ ಮಂತ್ರಸಿದ್ಧಿಯ
        ಪೆರ್ಮೆಯಲಿ ಮೇಣ್ ನಿತ್ಯ ಸೋಂಪಿನಲಿ.

ಯಾರು ಕೇಳಿದರೇನು ಮೇಣಾರು
        ಕೇಳದಿರಲೇನು ಪಕ್ಷಿಮಿತ್ರನೆ, ನೀ
ಹಾಡು ಇಂತೆ, ಬರಲಿ ದನಿಯಮೃತ
        ಕಿವಿ ಜಿಹ್ವೆ ತುಂಬಿ ಸೂಸುವನ್ನೆಗಂ !

ಮಾಗಿಯ ಮುಗಿಲಿನ ಓ ನಭವೇ !
        ವಸಂತ ವೈಖರಿಯ ಓ ಭುವಿಯೇ !
ತನುಮನ ತುಂಬಿ ಹರಿಯುವವೋಲ್
        ನಾಂ ಪಡೆದ ಏಕಾಂತ ಸುಖಶಾಂತಿ
ಶಿವ ಸತ್ಯವೋ ಸೌಂದರ್ಯವೋ
        ಏನಾದರಿರಲಿ, ನೀವ್ ವಂದ್ಯರೈ
ದಯದೋರಿದೆನಗೆ ಪಕ್ಷಿ ಗುರುವಾಗಿ !

ಕೃಪಾಸಿಂಧು

ಭವ್ಯ ಬಂಧುರ ಸ್ನೇಹಪರತೆಯಲಿ
ಅನನ್ಯ ಅನುಪಮ ಪ್ರೀತ್ಯಾದರದಲಿ
ಹೃತ್‌ಜಲ ಉಕ್ಕೇರಿ ಹರಿಯುತಿದೆ
ಹಗಲಿರುಳು ನಾಂ ಕಾದಿರಲು ನಿನಗಂ !

ಕಾಲನಿಧಿ ಎಣೆಯಿಲ್ಲದುರುಳುತಿರೆ
ನಿರೀಕ್ಷಣೆಯಕ್ಷಿಯು ಕಾದು ಸೋತು
ರಂಗೊರೆದು ಹನಿಮುತ್ತು ಚೆಲ್ಲಿದರೂ
ಬಗೆಯೊಳಿನಿತು ಬೇಸರದ ಸೋಂಕಿಲ್ಲ.

ಕಾಲದೇಶಗಳನಲೆದಲೆದು ನಾಂ
ಬಳಲಿ ತೊಳಲಿ ಬಾಳಿನ ಗಡಿಯೋಳ್
ಕಾತರದಿಂದಿಹೆ ಕೃಪಾಸಿಂಧು
ಹೃದಯಬನಕೆ ನೀಂ ಬರುವನ್ನೆಗೆಂ !

ಓಂ ಶಾಂತಿಃ ಶಾಂತಿಃ ಶಾಂತಿಃ

ಪೊಳ್ತಿಳಿದು ತಂಪೊರೆದು
ಜಗಮಂಡಲವೆಲ್ಲವಂ
ಆಳ್ದುದು ರುದ್ರ ಗಂಭೀರ
ಶಾನ್ತಿ–ಸುಶಾನ್ತಿ !
ಅತುಲ ಜೀವಕೋಟಿಯು
ಪಡೆದುದು ವಿಶ್ರಾಂತಿಯಂ
ಅಭಯ ಹಸ್ತ ನೀಡಿರಲ್
ಅಗಣಿತ ತಾರಾಗಣಂ
ಓಂ ಶಾಂತಿಃ ಶಾಂತಿಃ ಶಾಂತಿಃ

ಗೃಹಲಕ್ಷ್ಮಿ

ಓ ಭಾರತೀ, ಸಕಲ ಸೂತ್ರಧಾರಿಣೀ !
ಕಲುಷ ಪಂಕಿಲ ಸಂಸಾರ ಪ್ರಫುಲ್ಲ ಪದ್ಮಿನಿ !
ಪರಿಪಾವನಕರೀ ಶೋಭಿತ ಗೃಹಲಕ್ಷ್ಮೀ !
ಕಮನೀಯ ಕಠೋರ ಸುಖದುಃಖ ಭಂಜಿನೀ !
ಹೇ ನಿತ್ಯ ಜ್ಯೋತಿರ್ಧಾರಿಣೀ !

ಸೀಮಂತಸ್ಥಿತ ಅವಗುಂಠನಧಾರಿಣೀ !
ಸಕಲ ಕಲಾ ಪ್ರಾದುರ್ಭೂತ ಮೋಹಿನೀ !
ವಿನೋದ ವಿಮಲ ವರ ಸುಖದಾಯಕೀ !
ದೇವೀ ಶಾಲಿನೀ ಪರಮಾನಂದ ರೂಪಿಣೀ !
ಅನಂತ ಸ್ವರ್ಣಶೃಂಖಲಾಮೋದಿನಿ !

ಕೇಳ್ ಭಗಿನೀ, ಮಂದ ಮಧುರ ಸ್ಮಿತ ಮಂಜರಿ !
ಬುದ್ಧಿಗೇಡೆ ನಿಚ್ಚಕೊಲ್ವಕಲೆ ನರಗೆನೆ ತಪ್ಪಂತೆ !
ಬಾಳು ಬದುಕು ಹಸನು ಮಾಡೆ ಕೈಯ್ಯ ಮುಗಿದು
ಶಿರವನೊಡ್ಡಿ ಖಡ್ಗದಲುಗಿಗೆ ಪರಮುಪದಮಿಹುದಂತೆ
ನಿನಗಂ ಷರದಲಿ ಭಾರತಾವನೀ !

ವಿದ್ಯೆ ಬುದ್ಧಿಯ ಅವಶ್ಯಕತೆ ನಿನಗಿಲ್ಲವಂತೆ !
ಆರ್ಥಿಕ ತಾರ್ಕಿಕ ಪಾರಮಾರ್ಥಿಕ ಸತ್ಯ
ವೇದ ಶಾಸ್ತ್ರ ಪುರಾಣ ಜಪತಪಾದಿಗಳ ಅರ್ಥ
ನಿನಗಾಗದಂತೆ! ಅಜ್ಞೆ, ಅನ್ನಪೂರ್ಣೆ ಬೆರ್ಚಿ
ಜಾಸಗೇಡಾಗದಿರ್ ಶುಭ ಕೋರುವೆ ನಿನಗಕ್ಕು
ಓ ಅಮೂಲ್ಯ ಪುಣ್ಯಾವನೀ !

ನಿವೇದನೆ

ಸಂದುವಾದಿನ ಕಂಬನಿಯ ಕೋಡಿ ಹರಿಸಿ
ಅಂಬರದಿ ಮುಗಿಲು ಮುನ್ನೀರ ಚೆಲ್ವಿಂದದಿ !
ಬಿಕ್ಕಳಿಸೆ ಮುಂಗಾರ ಗಾಳಿ ಗದ್ಗದವ
ನೀಡಿತ್ತು ರುದ್ರೋಚ್ಛ್ವಾಸವ ತಾ ಸೂಸಿ !
ಭೋರ್ಗರೆವ ದುಃಖದಗಡಲು ಸರಾಗ
ಪರಿದೊಡೆ ಇರ್ಚ್ಛಾಸಿರನಿತ್ತ ಭವಂ !
ಹೃದಯ ದೇಗುಲ ಅಶ್ರು ಜಲದಿ ತೊಯ್ದು
ನಿಶ್ಚಂದ್ರನಭದೊಲ್ ಕಳೆಗುಂದಿವತ್ತು !
ಹೇ, ನೀಲಕಂಠ ! ಅಂದಿನಿಂದ ಕಾಯ್ದೆ,
ಸಲಹಿ ಬಾಳತುದಿಗೆ ತಂದೆ ಶಾಂತಿಯೀಯೆ ;
ಇನ್ನು ಮರೆಯದಿರೆನ್ನ ಮಮ ಮನವನ್ನ !
ನಿನ್ನಯ ಪದತಲವ ಬಯಸಿಹೆ ಮನಸಾಕ್ಷಿ.
ಕರವ ಜೋಡಿಸುವೆ ವಿನಮ್ರತಾ ಪೂಣ್ತೆಯಿಂ
ನಡೆಸೆನ್ನ ಪೂರ್ಣಪ್ರಜ್ಞೆಯ ಪರಮಪದಕೆ.

ಇಂದಿರೆ

ಇಂದಿರೆ, ಕಮಲ ಗರ್ಭ ಸಂಭೂತೆ
ಮೋತೀಲಾಲ ಸ್ವರೂಪರಾಣೀ
ಕುಲ ಕೀರುತಿಯ ಕಸ್ತೂರಿ ಪ್ರಭೆ !
ಭಾರತಾತ್ಮಜೆ, ಸುಜನ ಸಂಪ್ರೀತೆ !

ಕೆಚ್ಚೆದೆಯ ವೀರ ನಾರಿಶ್ರೀ ! ದಿಟ್ಟ
ತನದಿ ಎತ್ತಿಹಿಡಿ ಧವಳ ಕೀರ್ತಿಯ
ತ್ರಿವರ್ಣರಂಜಿತ ಭವ್ಯ ಬಾವುಟ ;
ಹಾರಲಿ ನಿತ್ಯ ಭಾರತ ಗಗನದಲಿ !

ನಿನ್ನ ತೀಕ್ಷ್ಣಮತಿಯು ಮುನ್ನಡೆಸಲೀ
ದೇಶ ಶಕ್ತಿ ನಿತ್ಯ ನೇರ ಪಥದಿ,
ವಿದ್ಯಾವೋದದಿಂಪಿನ ಗಂಭೀರ
ವಜ್ರ ಮನೋಹರ ಶೋಭೆಯಲಿ !

ನೆಹರೂ ಗರಡಿಯ ವರ ಚಿದಂಬರೆ
ಪಿತೃಪ್ರೇಮದ ಅಮೃತ ಪುತ್ರಿ !
ರಾಷ್ಟ್ರಭಾರ ಬ್ರಹ್ಮವಿದ್ಯಾ ಸದನೆ
ಚಿರವಾಗಲಿ ತವ ನಾಮಧೇಯ
ಭಾರತ ನಭದಲಿ !

ನಿಲ್ವುದೇ ಯುದ್ಧ ಪ್ರಕಾಂಡಂ?

ಸಾಮ್ರಾಜ್ಯದಾಹ ! ಯುದ್ಧದಾಹ ! ರಕ್ತದಾಹ !
ಕೊಬ್ಬಿದವರ ಕೊನೆಯರಿಯದ ದಾಹ ಕೋಟಿ ಕೋಟಿ !
ಒಡಲಂ ತುಂಬಿರೆ ಈರ್ಷ್ಯಾಸೂಯೆ ಧನಮದವು
ನರಕಟ ನಿಟಿನಿಟಿ ಮುರಿಯಲ್ ಹೂಡಿದೆ ಹಾಳ್ಸಂಚು !

ಅಣುಬಾಂಬಂ ಗೆಯ್ದು ಜನವಸತಿಯಲೆಸೆದು ಕರುಣೆ
ಇಲ್ಲದಿನಿತು ನರಕೋಟಿಯುಂ ಕೊಲ್ಲಲ್ ಬಪ್ಪುದೆ
ಶಾಂತಿಧಾಮವದು ಹೃತ್ಕಮಲ ಕುಟ್ಮಲದಲಿ ? ತನು
ಬೆಳಗಲಹುದೇ ಸತ್ಯ ಮನೋಹರ ಶೋಭೆಯಲಿ ?

ಅಕಟಕಟಾ ! ಯುದ್ಧ ನಿಲ್ವುದೇ ? ಶಸ್ತ್ರಗಳಿರೆ,
ಪ್ರಜಾಕಲ್ಯಾಣದಿ ಧರ್ಮದೃಷ್ಟಿಯಿಲ್ಲದಿರೆ
ಹೆ ವೀರವರಾ ! ಭುಜಮೂಲ ಶಕ್ತಿಯ ಬಳಸೈ
ಲೋಕಾಲೋಕಗಳಲಿ ಪರಮ ಪದವನೋಲೈಸೆ ;

ತನ್ನ ಕಂದಗಳೊಂದೆಡೆ ಬೆಂದುಪೋಗೆ ಪ್ರಕೃತಿ
ಸುಮ್ಮನಿರ್ಪಳೆ ? ನೊಂದವರ ನೆತ್ತರಿನ ಕಣದಲಿ
ಮರುರಕ್ತಕೆ ನಾಂದಿಯ ಹಾಡಿ ಹುರಿದುಂಬಿಪಳ್ಳೆ
ಧರ್ಮಪತನವ ಸಹಿಸದಿನಿತು ಮಾತೃಭಾವದಿ !

ಸರ್ವಥಾಂತಿಮ ಯುದ್ಧವಲ್ತು ಈ ಘನ ಘೋರ
ಯುದ್ಧ ಪ್ರಕಾಂಡಂ ! ಮತ್ತೆ ಮತ್ತೆ ಮೇಣ್ಮತ್ತೆ
ಹೆರಲಿಹಳಾ ಯುದ್ಧಗಳ ತಾಯಿ ಮಹಾಕಾಳಿ !
ನೀ ತಲೆಗೊಟ್ಟು ಸಾಯೊ ಸಾಯಿ ಸ್ವಾರ್ಥಿ ಮನುಜಾ !

ದಿನಕರ

ಏಳು, ಎದ್ದೇಳು ! ಓ ಪ್ರಾಣಪದಕ !
   ಪೂರ್ವ ದಿಗ್ದೀರ್ಘಿಕಾ
ಧವಳಗಿರಿ ಶಿಖರ ಪುಣ್ಯರಂಗದಿಂ.
      ಸ್ವರ್ಣ ಸೌಂದರ್ಯನಿಧಿ,
ಹೇ ನೀಲ ಫಾಲ ಶೋಭೀ ದಿನಕರ !
      ಏಳು, ಮೇಲೇಳು;
ಕಲ್ಪನಾತೀತ ! ವಾಙ್ಮನಾತೀತ !
      ಕಾಳರಾತ್ರಿಯುರುಳಿ
ಸುಪ್ರಭಾತ ಮೂಡಿ ನವದಿನಂ ಬಲಿಯೆ.
      ನೀಲ ಕಮಲಿನಿಯಲಿ
ನೂತನ ಪೀತ ಕೋಕನದರಳ್ವವೊಲ್
      ವಸಂತ ವನರಾಜಿ
ವಿಕಸಿಸಿ ರಸದೃಷ್ಟಿಯನಾಕರ್ಷಿಸುವೊಲ್
      ನಿತ್ಯ ಕಲಕಲಗೈವ
ಸಕಲ ವನವಿಹಂಗಮುಗಳುಲಿಹಕ್ಕೆ
      ಉಬ್ಬಿ ಅಲೆಯೇರುವ
ಕಡಲ ಯೋಗ ವೇಗವಂ ವಿರ್ವಾರ್ಪವೊಲ್ !
      ಏಳು, ಏಳ್ಕೈ, ದಿನಕರ !
ನಿಗೂಢ ಚೈತನ್ಯ, ಘನ ವಿಸ್ತಾರ !
      ಅರುಣ ಕಿರಣ ಸಾಂದ್ರ
ಮುನ್ನಡೆಸು ಜೀವನ ರಥೋತ್ಸವವಂ
      ಅನ್ನೆಗಂ ಮನಮುಟ್ಟಿ
ಧರ್ಮಕರ್ಮ ಸಂಯೋಜನೆಯಲಿ ಪಡೆಯೆ
      ಜೀವನ್ಮುಕ್ತಿ....!

ಪಶ್ಚಾತ್ತಾಪ

ಮೈಯ್ಯ ಸುಣ್ಣಿಗೆ ಬಭ್ರುವರ್ಣಂ ಕೋದು
ಬಿಳಿ ಚುಕ್ಕಿಯ ಚೆಲ್ವ ಪೂಸಿ ಮೆಲ್ಲಮೆಲ್ಲನೆ
ಹರಿದು ಬರೆ ಬೆರಳಗಾತರದುರಗಂ ಬೇಲಿಯ
ಬಳಿಯ ಹಸುರು ಹಾಸಿನಲಿ ಸೀಳ್ನಾಲಿಗೆ ಚಾಚಿ !

ಆರಿಗಾದರೂ ಕಚ್ಚಬಂತೆ ? ಇಲ್ಲ; ಇಲ್ಲ.
ವಿಷಪೂರಿತವೇ ? ಗೊತ್ತಿಲ್ಲವೆನೆ ತಪ್ಪಲ್ಲ.
ಅಷ್ಟರೊಳಾರ ದಿಟ್ಟಿಗೆ ಬಿತ್ತೊ ಒಗೆದರೊಂದು
ಕಲ್ಲ, ಪುಟ್ಟುರುಗಂ ಅಲ್ಲೆ ಜಜ್ಜಿ ಸಾಯ್ವವೊಲ್ !

ಆ ಕಡು ವೇದನೆಯೊತ್ತಡವ ಅದು ತಡೆಯಲಳವೆ ?
ಮಿಲಮಿಲನೆ ಒದ್ದಾಡಿ ಸುರುಳಿ ಸುತ್ತಿತಕಟಾ !
ಮೂಕ ಜಂತು ತಾ ಮರಣ ಸಂಕಟದಲಿ ಸಿಲ್ಕಿ
ಅತ್ತು ಚೀರಲರಿಯದೆ ನರಳುತಿರೆ ತನ್ನೊಳಗೆ.

ಹಾ ! ಎಂದೊರಲುತಲಿ ಎನ್ನಯ ಹೃದಯ ಹಂಸೆ
ಪ್ರಾರ್ಥಿಸಿತು ಮನಮುಟ್ಟಿ ಜಗದೀಶ್ವರನಂ
“ಜೀಯಾ ! ನರಳಿಸುವ ಬದಲೀಗಲೀಯು ಸಾವು
ನಿನ್ನ ಸಗ್ಗ ಸಂಪದವ ಕರುಣಿಸು ಕರುಣಾಳು !”

ಸನ್ಮಂಗಳಾನಿಭವಂತು!

ಗಂಗೆಗೆರೆದಾ ಹೆಂಡ ಗಂಗೆಯಪ್ಪವವೋಲ್
ಅಗ್ನಿಗಿಟ್ಟಾ ಸಮಿತ್ತು ಅಗ್ನಿಯಪ್ಪವವೋಲ್
ಗುರುಕೃಪಾ ತೀಕ್ಷ್ಣಮತಿಯೊಳ್ ಕರಗಲೆಮ್ಮ
ಕುಮತಿಯ ವಕ್ರವಿಕೃತ ದುಷ್ಟವ್ಯಾಘ್ರಂ ಗಡ !
ಓವೋ ! ನೋಡಾ ದಿಗಂತದಲಿ ಮೂಡುತಲಿವೆ
ಬುದ್ಬುದಗಳಂದದಲಿ ಸೀಮಾ ಪುರುಷ ಶ್ರೇಣಿ !
ಹಾ, ಏನೆಂಬೆ ? ನೀ ತೊಳಲಿ ಬಳಲುತಿರಲಿಂತು
ಶಾಸ್ತ್ರಶೃಂಖಲಾ ಕೋಟಿ ಕೊತ್ತಲಗಳಲಿ !
ಅಂಜುವೆಯೇಕೆಲೇ ತರಳೆ ? ಜೊಳ್ಳು ಪೊಳ್ಳುಗಳ
ಕಿತ್ತೆಸೆದೀಡಾಡು ಹರದಾರಿ ಹಾರ್ವ ತೆರದಿ !
ಜತನ ! ಇನ್ನೆಂದೂ ಮುಟ್ಟದಿರಲವು ನಿನ್ನಂ
ವಜ್ರ ಮುಷ್ಟಿಯ ಪಿಶಾಚಹಸ್ತದಲಿ ಸೋದರಿ !
ಗೋಲಿಯಂದದಿ ನುಗ್ಗಿಬಹ ಕರ್ಮಾನುತತಿಗೆ
ಕಿಚ್ಚಿನ ಕಿಡಿಯಂದದಿ ನೀ ಎದೆಗೊಟ್ಟು ನಿಲ್ಲು !
ಇಹುದೆಲ್ಲವು ನಿನ್ನ ಕೈಲಿ ಕಂಗೆಡದಿರಿನಿತು
ಸ್ನೇಹರಾಗಿಣಿ, ಸನ್ಮಂಗಳಾನಿಭವಂತು !

ಗಾಂಧೀ ಮತ್ತು ಕ್ವಿಟ್ ಇಂಡಿಯಾ !

ಭಾರತ ಹೃತ್ಕಮಲ ಕರಂಡದಲಿ ನೀ
ಬರೆದೆ ಕೆಚ್ಚಿನಕ್ಷರವ ಮಿಂಚಿನಂದದಿ,
ಸಂಧಾನಸುಸಂಧಾನ ಕೊನೆಮುರಿಯಲ್
ವಿನೂತನ ರಾಷ್ಟ್ರವಿಮೋಚನಾ ಮಂತ್ರ !
ಕ್ವಿಟ್ ಇಂಡಿಯಾ !

ಆತ್ಮಶ್ರೀವಿದೂರರ ಕೂಡೆ ಇನ್ನೀ
ವ್ಯವಹಾರ ಸಲ್ಲ ಎನಿಸೆ ಒಳಗುದಿಯಲಿ
ಬೆಂದು ಮನಸೋತು ನೀನೊರೆದೆ ಭವ್ಯ
ಭಾರತಕೆ ಸ್ವಾತಂತ್ರ್ಯಮಂತ್ರಗಾಯತ್ರಿ !
ಕ್ವಿಟ್ ಇಂಡಿಯಾ !

ಭಾರತ ನೇತಾ ಸಾರಿರೆ ಓಜೆಯಲಿ
ಕಂಠ ಕಹಳೆ ಮೊಳಗಿತಲಾ ದಿಶೆದಿಶೆಗೆ !
ರಕ್ತ ಪಿಪಾಸಿಯು ಕಿತ್ತೊಗೆದೀಡಾಡೆ
ದಿವ್ಯಾಸ್ತ್ರವೀ ನಿಶ್ಶಸ್ತ್ರ ಯುದ್ಧ ಮಂತ್ರ !
ಕ್ವಿಟ್ ಇಂಡಿಯಾ !

ಜಗದೊಳಿರದ ಮಂತ್ರ ! ಶಾರದೆಯರಿಯದ
ಮಂತ್ರ ! ಶಾಲೆಯಲಿ ಕಲಿಯದ ಮಂತ್ರ ! ಆರು
ಕಂಡರಿಯದ ಮಂತ್ರ ! ನೀಕಂಡು ಹಿಡಿದೆ
ಲೋಕವನಚ್ಚರಿಯೋಳ್ ಮುಳುಗಿಪ ಮಂತ್ರ !
ಕ್ವಿಟ್ ಇಂಡಿಯಾ !

ಹೃದಯ ವಾಣಿ !

ನಾನೆಲ್ಲ ಬಲ್ಲೆ ಎಂದಾದರೂ ನೀನು
ತೊರೆವೆ ಈ ಜಗದ ಮೋಹ ಮಾಯೆ !

ಕಣ್ಸೆಳೆವ ಕಾಮನೆಯು ಕೊನೆ ಮುಟ್ಟೆ
ರೋಷ-ತೋಷ-ಸುಖ-ದುಃಖಗಳ
ವಸಂತೋತ್ಸವವನು ಆಚರಿಸಿ
ಕಂಬನಿ ಕಾಲುವೆಯಲಿ ಮುಳುಗೆದ್ದು
ಟೊಳ್ಳು ಗಟ್ಟಿಯ ಬೆಲೆಯನರಿತು
ಬಂದೇ ಬರುವೆ ತೆರೆದೆನ್ನ ಹೃದಯ ಮಂದಿರಕೆ !

ಶ್ರೀ ಶಾರದೆ

ಬ್ರಹ್ಮಗರ್ಭ ಸಂಭವೆ, ಚಿನ್ಮಯೀ,
ಚಿದಾನಂದರೂಪಿಣಿ, ಸುಶಾಂತಿ, ಮನೋಹರಿ,
ಸಕಲ ವಿದ್ಯಾವಿನೋದಿನಿ, ಮೃದು ಮಧುರವಾಣಿ,
ತಾಯೆ, ಶ್ರೀ ಶಾರದೆ, ನಿತ್ಯ ಸರೋಜ ಹಸ್ತೆ
ನಮೋ ನಮೋ ಭಾವಚಿಂತಾಖನಿ !
ನಮೋ ನಮೋ ಕಾವ್ಯಕಾಮಿನಿ !

ಆನಂದಮಯೀ, ತ್ರಿಭುವನ ಮೋಹಿನೀ,
ಪರಮ ಕವಿತಾ ಕಲ್ಯಾಣಿ, ವೀಣಾಪಾಣಿ,
ವರದೆ, ವಿಭವೆ, ವಿದ್ಯಾಮಾಧುರ್ಯ ಸಂಹಿತೆ,
ವಿರಿಂಚಿ ಹೃದಯ ಸಂಪ್ರೀತೆ, ಪೀತವರ್ಣೆ
ನಮೋ ನಮೋ ಧವಳಾಂಬರಧಾರಿಣಿ !
ನಮೋ ನಮೋ ಕಲ್ಪನಾಸುಂದರಿ !

- ಸಂಪೂರ್ಣಂ -

ಮಲ್ಲಿಕಾರವರ

ಪ್ರಕಟಿತ ಕೃತಿಗಳು

ಜೀವನ ಗಂಗಾ
ಡಾಕ್ಟರ್ ಅಘೋರ
ರತ್ನಗರ್ಭಾ ವಸುಂಧರಾ
ಬಹುರತ್ನಾ ವಸುಂಧರಾ
ಡಾಕ್ಟರ್ ಕಮಲೇಶ್
ಲಿಯೋನಾ
ಪೂಜಾವಸಾನಸಮಯೆ...!
ಧ್ಯಾನಾವಸಾನಸಮಯೆ...!
ಗಾನತೀರ್ಥ

ಸಧ್ಯದಲ್ಲಿಯೇ ಪ್ರಕಟವಾಗಲಿರುವ ಕೃತಿಗಳು :

ವಂದೇಮಾತರಂ
ನಾದ ಬಿಂದು
ಅನಂತಾನಂತದೆಡೆಗೆ
ವೀರಭೋಗ್ಯಾವಸುಂಧರಾ

ಮುಂಬರಲಿರುವ ಕೃತಿಗಳು :

ಶೇಷ ರತ್ನ
ಶಾಂ-ಶಾಂತಿ
ಹೇಮು-ಗಂಗಾ
ಭಗವಾನ್ ಸೂರಿ
ಗೂಢಚಾರ